

ಖಾಸಗಿ ಪ್ರಸಾರ

# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

SHRIDEVI EDUCATION

ಮಾಸಪತ್ರಿಕೆ
ಸಂಪುಟ 4, ಸಂಚಿಕೆ 1, ನವೆಂಬರ್ 2025

SHRIDEVI ANTARANGA
Monthly Magazine




ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್   ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್   ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್   ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.




**ಸಂಪಾದಕರ ಅಂತರಂಗ**


ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ


## ಆಚರಣೆಗಿಂತ ನಿಜವಾದ ಪ್ರೀತಿ ಹಾಗೂ ಬದ್ಧತೆ ಮುಖ್ಯ



ಕರ್ನಾಟಕದ ಆಧುನಿಕ ಇತಿಹಾಸವನ್ನು ಗಮನಿಸಿ ಹೇಳುವುದಾದರೆ ಮುಖ್ಯವಾದ ಎರಡು ಐತಿಹಾಸಿಕ ಘಟನೆಗಳಿವೆ. ಮೊದಲನೆಯದು ಭಾರತದ ಸ್ವಾತಂತ್ರ ಸಂಗ್ರಾಮ. ಎರಡನೆಯದು ಕರ್ನಾಟಕ ಏಕೀಕರಣ ಚಳವಳಿ.

1857ರಲ್ಲಿ ನಡೆದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರ್ವದಲ್ಲಿ ಟಿಪ್ಪುಸುಲ್ತಾನ್ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಅವರುಗಳು ಬ್ರಿಟಿಷರ ವಿರುದ್ಧ ರಣಕಹಳೆ ಊದಿದ್ದರು. ಮಹಾತ್ಮ ಗಾಂಧೀಜಿ ಕಾಲದಲ್ಲೂ ಕರ್ನಾಟಕ ರಾಜ್ಯವು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದೆ.

ಮತ್ತೊಂದು ಪ್ರಮುಖ ಘಟನೆ ಏಕೀಕರಣ ಚಳವಳಿ. ಬ್ರಿಟಿಷರು ಟಿಪ್ಪುಸುಲ್ತಾನನ ಮರಣದ ಅನಂತರ ಕರ್ನಾಟಕವನ್ನು ಇಪ್ಪತ್ತು ಭಾಗಗಳಾಗಿ ಹರಿದು ಹಂಚಿಬಿಟ್ಟರು. ಅವುಗಳೆಂದರೆ ಮೈಸೂರ್ ಸಂಸ್ಥಾನ, ಮದ್ರಾಸ್ ಸಂಸ್ಥಾನ, ಮುಂಬೈ ಪ್ರಾಂತ್ಯ, ಹೈದರಾಬಾದ್ ಸಂಸ್ಥಾನ, ಕೊಡಗು, ರಾಮದುರ್ಗ ಸಂಸ್ಥಾನ, ಜಮಖಂಡಿ ಮತ್ತು ಮುಧೋಳ್ ಸಂಸ್ಥಾನ, ಜತ್ ಸಂಸ್ಥಾನ, ಅಕ್ಕಲಕೋಟೆ ಸಂಸ್ಥಾನ, ಕೊಲ್ಲಾಪುರ ಸಂಸ್ಥಾನ ಸಂಡೂರು ಸಂಸ್ಥಾನ, ಸವಣೂರು ಸಂಸ್ಥಾನ ಹಾಗೂ ಕಂಟ್ರೋನ್ಮೆಂಟ್ ಕರ್ನಾಟಕ. ಈ ಎಲ್ಲ ಭಾಗಗಳಲ್ಲೂ ಕನ್ನಡಿಗರು ಛಿದ್ರ ಛಿದ್ರವಾಗಿ ಹರಿದು ಹಂಚಿ ಹೋಗಿದ್ದರು. ಬೇರೆ ಬೇರೆ ಪ್ರಾಂತ್ಯದಲ್ಲಿದ್ದ ಕನ್ನಡಿಗರ ಸ್ಥಿತಿ ಅತ್ಯಂತ ಹೀನಾಯವಾಗಿತ್ತು. ಮರಾಠಿ, ಉರ್ದು, ತಮಿಳು ಮತ್ತು ತೆಲುಗು ಭಾಷೆಗಳ ನಡುವೆ ಸಿಲುಕಿದ ಕನ್ನಡ ಭಾಷೆ ನರಳುತ್ತಿತ್ತು.

▶▶ 2ನೇ ಪುಟಕ್ಕೆ...




ಇನೋವೇಶನ್ ಇಗ್ನೈಟ್ ಕಾರ್ಯಾಗಾರ– 2025ನ್ನು ಉದ್ಘಾಟನಾ ಸಮಾರಂಭ.

## ಶ್ರೀದೇವಿ ಇಂಜಿನಿಯರಿಂಗ್ ಕಾಲೇಜ್
# ಕ್ಯಾಂಪಸ್ ಪ್ರತಿಭೆಗಳ ತಾಣ

"ದೇಶದ ಯಾವುದೇ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿಯೂ ಇಲ್ಲದ ಮೂಲಸೌಲಭ್ಯ ಮತ್ತು ಸುಸಜ್ಜಿತ ಪ್ರಯೋಗಾಲಯಗಳನ್ನು ಸ್ಥಾಪನೆ ಮಾಡಿರುವ ಶ್ರೀದೇವಿ ಶಿಕ್ಷಣ ಕ್ಯಾಂಪಸ್ ಪ್ರತಿಭೆಗಳ  ತಾಣ. ಇಲ್ಲಿನ ಮಕ್ಕಳು ಮತ್ತು ಅಧ್ಯಾಪಕರು ಅದೃಷ್ಟವಂತರು".

ಹೀಗೆ ಹೇಳಿದವರು ಜಿಸಿಸಿ ತಾಂತ್ರಿಕ ಸಂಸ್ಥೆಯ ಅಧ್ಯಕ್ಷ ರಾಜೀವ್ ಶ್ರೀನಿವಾಸ್. ಸಂದರ್ಭ: ಕಾಲೇಜಿನ ಕಂಪ್ಯೂಟರ್ ಸೈನ್ಸ್, ಇಂಜಿನಿಯರಿಂಗ್ ವಿಭಾಗದ ಸಹಯೋಗದೊಂದಿಗೆ ನವೆಂಬರ್ ಎರಡನೇ ವಾರದಲ್ಲಿ ಹಮ್ಮಿಕೊಂಡಿದ್ದ ಇನೋವೇಶನ್ ಇಗ್ನೈಟ್ ಕಾರ್ಯಾಗಾರ – 2025ನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

"ನಾನು ದೇಶದ ಹಲವು ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ಭೇಟಿ ನೀಡಿದ್ದೇನೆ. ಆದರೆ ಇಲ್ಲಿನ ಮೂಲಭೂತ ಸೌಲಭ್ಯ ವಿಶೇಷವಾಗಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ದೊರಕಿರುವ ಸುಸಜ್ಜಿತ ಪ್ರಯೋಗಾಲಯ ನಿಜಕ್ಕೂ ನಿಬ್ಬೆರಗು ಮೂಡಿಸುತ್ತದೆ. ಇಲ್ಲಿ ಕಲಿಯುವ ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವರ್ಗದವರು ಎರಡೂ ವರ್ಗಗಳವರೂ ಅದೃಷ್ಟವಂತರು. ಇಂತಹ ಶಿಕ್ಷಣ ಕ್ಯಾಂಪಸ್ ನಿರ್ಮಿಸುವುದು ಸುಲಭದ ಮಾತಲ್ಲ. ಯಾರಿಗೆ ಶಿಕ್ಷಣ ಮತ್ತು ಮಾನವ ಕಲ್ಯಾಣ, ದೇಶದ ಪ್ರಗತಿ ಬಗ್ಗೆ ಕಾಳಜಿ, ಕಳಕಳಿಯಿರುತ್ತದೋ ಅಂತಹ ವ್ಯಕ್ತಿಗಳಿಂದ ಮಾತ್ರ ಇಂತಹ ಕ್ಯಾಂಪಸ್ ನಿರ್ಮಾಣ ಮಾಡಲು ಸಾಧ್ಯ" ಎಂದು ರಾಜೀವ ಶ್ರೀನಿವಾಸ ಹೇಳಿದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಮಾತನಾಡುತ್ತಾ "ಕಳೆದ 25–30 ವರ್ಷಗಳಲ್ಲಿ ತಂತ್ರಜ್ಞಾನ ಬೆಳದಂತೆ ವೈದ್ಯಕೀಯಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಆಗಿದೆ. ಇದರಿಂದ ರೋಗ ಪತ್ತೆ ಹಚ್ಚುವಿಕೆ, ಚಿಕಿತ್ಸೆ ಕೆಲಸ ಸುಲಭವಾಗಿದೆ. ತಂತ್ರಜ್ಞಾನದ ಪ್ರಯೋಜನಗಳು ಜನಸಾಮಾನ್ಯರಿಗೂ ತಲುಪುತ್ತಿದೆ. ಇದರಿಂದ ಜನಸಾಮಾನ್ಯರ ಬದುಕು ಹಸನಾಗುತ್ತಿದೆ" ಎಂದು ಅಭಿಪ್ರಾಯಪಟ್ಟರು.

ಕಾಲೇಜಿನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್ ಅವರು "ಇಂತಹ ವಿಚಾರ ಸಂಕಿರಣ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ ಬೆಳೆಸಲು ಮತ್ತು ಹೆಚ್ಚು ವೃತ್ತಿಪರರನ್ನಾಗಿ ಮಾಡಲು ಸಹಕಾರಿಯಾಗುತ್ತದೆ. ಆದ್ದರಿಂದ ಇಂತಹ ಉತ್ತಮ ಅವಕಾಶಗಳನ್ನು ವಿದ್ಯಾರ್ಥಿಗಳು ಬಳಸಿಕೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು" ಎಂದು ಕರೆ ನೀಡಿದರು.

ವಿದ್ಯಾರ್ಥಿಗಳಲ್ಲಿ ಹೊಸ ಆಲೋಚನೆ, ತಾಂತ್ರಿಕ ನಾವಿನ್ಯತೆ, ಸಮಸ್ಯೆ ಪರಿಹಾರ ಟೆಕ್ನಿಕಲ್ ಕ್ವಿಜ್, ಮಿನಿ ಹ್ಯಾಕಥಾನ್ ಮತ್ತು ಮಾಡಲ್ ಪ್ರೆಸೆಂಟೇಶನ್ ಎಂಬ ಮೂರು ವಿಭಾಗಗಳಲ್ಲಿ




ಸ್ಪರ್ಧೆ ಏರ್ಪಡಿಸಲಾಗಿತ್ತು.

ರಾಜ್ಯದ ಹಲವು ಜಿಲ್ಲೆಗಳಿಂದ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾರ್ಯಾಗಾರದಲ್ಲಿ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ನರೇಂದ್ರ ವಿಶ್ವನಾಥ್ ಉಪ ಪ್ರಾಂಶುಪಾಲ ಡಾ. ಚಂದ್ರಶೇಖರ್, ಶ್ರೀದೇವಿ ಕಾಲೇಜಿನ ವೈದ್ಯಕೀಯ ನಿರ್ದೇಶಕ ಡಾ. ರಮಣ್ ಎಂ ಹುಲಿನಾಯ್ಕರ್ ಹಾಗೂ ಇತರರು ಭಾಗಿಯಾಗಿದ್ದರು.

ಟೆಕ್ನಿಕಲ್  ಕ್ವಿಜ್, ಮತ್ತು  ಮಿನಿ ಹಾಕಥಾನ್  ಮತ್ತು ಮಾಡೆಲ್ ಸೇರಿದಂತೆ ಮೂರು  ವಿಭಾಗದ ಸ್ಪರ್ಧೆಯಲ್ಲಿ ಒಟ್ಟು 20 ವಿದ್ಯಾರ್ಥಿಗಳು ಒಟ್ಟು 35ಸಾವಿರ ನಗದು ಬಹುಮಾನ ಗೆದ್ದುಕೊಂಡಿದ್ದಾರೆ.

**ಟೆಕ್ನಿಕಲ್  ಕ್ವಿಜ್:** ಟಿ. ಕೆ. ಕಾರ್ತಿಕ, ಹರ್ಷಿತಾ ಎಸ್ .ಆರ್. ಮೊದಲ ಬಹುಮಾನ. ದಯಾನಂದ್ ಸಾಗರ್ ಇಂಜಿನಿಯರಿಂಗ್ ಕಾಲೇಜ್ ಬೆಂಗಳೂರು. ದನಿಕ್ ಜಿ. ಕೇವಲ್ ಕುಮಾರ್ ಎಂ.ಎ. ಎರಡನೇ ಬಹುಮಾನ. ಸಿದ್ದಾರ್ಥ ಇಂಜಿನಿಯರಿಂಗ್ ಕಾಲೇಜು ತುಮಕೂರು. ಪೂರ್ಣಶ್ರೀ ಟಿ.ಪಿ. ಭಾವನ ಕೆ.ಎಲ್. ಮೂರನೇ ಬಹುಮಾನ.ಶ್ರೀ ಜಗದ್ಗುರು ಬಾಲಗಂಗಾಧರನಾಥ ಇಂಜಿನಿಯರಿಂಗ್ ಕಾಲೇಜು,

**ಮಿನಿ ಹಾಕಥಾನ್:** ಆಶ್ರಿತಾ ಆರ್. ಶಾಂಭವಿ ಎಂ ವೈ, ಮೊದಲ ಬಹುಮಾನ. ಪಿಇಎಸ್ ಎಂಜಿನಿಯರಿಂಗ್ ಕಾಲೇಜು. ಬೆಂಗಳೂರು. ಲಕ್ಷ್ಮಿಕಾಂತ ಡಿ. ಹೆಚ್. ಕೌಶಿಕ್ ಸಿ. ಎರಡನೇ ಬಹುಮಾನ. ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ತುಮಕೂರು. ಕಾವ್ಯಶ್ರೀಎನ್,  ಪುಷ್ಪಲತಾ ಬಿ.ಎಸ್. ಮೂರನೇ ಬಹುಮಾನ. ಸಿದ್ದಗಂಗಾ ಇಂಜಿನಿಯರಿಂಗ್ ಕಾಲೇಜು  ತುಮಕೂರು.

**ಮಾಡೆಲ್ ವಿಭಾಗ:** ಬೆಂಗಳೂರಿನ ದಯಾನಂದ ಸಾಗರ್ ಕಾಲೇಜಿನ ಅಭಿಷೇಕ್ ಹೆಚ್. ಜೆ. ಅನಿರುದ್ಧ ಎಚ್.ಎಸ್. ಮೊದಲ ಬಹುಮಾನ. ನಾವ್ಕಿಸ್ ಹಾಸನ ಇಂಜಿನಿಯರಿಂಗ್ ಕಾಲೇಜಿನ ಸೈಯದ್ ಸಾದ್, ಅಹಮದ್ ಖಾದ್ರಿ, ರಕ್ಷಿತಾ ಆರ್. ಎರಡನೇ ಬಹುಮಾನ. ಮತ್ತು ಹನುಮಂತ ರಾಯ, ಕುಮ್ಮಾನಿ, ಯು. ಮುರಳಿ ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು ತುಮಕೂರು.

▪ ವರದಿ: ರಾಜಮನ್ನಾರ್

# ಪ್ರೀತಿ ಹಾಗೂ ಬದ್ಧತೆ ಮುಖ್ಯ

▶▶ ಮೊದಲನೇ ಪುಟದಿಂದ

1937ರಲ್ಲಿ ಮುಂಬೈ ಪ್ರಾಂತ್ಯದ ಜನಸಂಖ್ಯೆ 1.17 ಕೋಟಿ. ಇದರಲ್ಲಿ 31 ಲಕ್ಷ ಜನ ಕನ್ನಡಿಗರಿದ್ದರು. ಮದ್ರಾಸ್ ಪ್ರಾಂತ್ಯದ ಜನಸಂಖ್ಯೆ 1.77 ಕೋಟಿ. ಅದರಲ್ಲಿ 17 ಲಕ್ಷ ಜನ ಕನ್ನಡಿಗರಿದ್ದರು. ಬ್ರಿಟಿಷರ ಆಡಳಿತ ಅವಧಿಯಲ್ಲಿ 68 ಲಕ್ಷ ಜನ ಕನ್ನಡಿಗರಿದ್ದರು. ಅವರಿಗೆ ಇದ್ದದ್ದು ಒಬ್ಬರೇ ಪ್ರತಿನಿಧಿ. ಬೇರೆ, ಬೇರೆ ಪ್ರಾಂತ್ಯಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಪ್ರತಿನಿಧಿಗಳು ಇರುತ್ತಿದ್ದರು. ಇಂತಹ ಅಸಮಾನತೆಯ ವಿರುದ್ಧ ಹೋರಾಡಲು ಕನ್ನಡದ ಕೆಲವು ಚೇತನಗಳು ಪ್ರಯತ್ನ ಮಾಡಿದವು.

ಕನ್ನಡಭಾಷೆಗೆ ಎರಡು ಸಾವಿರ ವರ್ಷಗಳ ಸಮೃದ್ಧ ಇತಿಹಾಸವಿದೆ. ಆಧುನಿಕ ಕಾಲದಲ್ಲೂ 8 ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಭಾಷೆಯೆಂದು ಕನ್ನಡ ಭಾಷೆ ಪ್ರಸಿದ್ಧವಾಗಿದೆ. ಇಂತಹ ಭಾಷೆಯನ್ನಾಡುವ ಜನರೆಲ್ಲಾ ಒಂದೂಗೂಡಬೇಕು ಎಂದು ನಮ್ಮ ರಾಜ್ಯದ ಹಿರಿಯ ಚೇತನಗಳು ಭಾವಿಸಿದವು. 1890ರಲ್ಲಿ ರಾ.ಹ.ದೇಶಪಾಂಡೆ ಅವರು ಧಾರವಾಡದಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ'ವನ್ನು ಪ್ರಾರಂಭಿಸಿದರು. ಅದು ಕನ್ನಡನಾಡಿನ ಏಕೀಕರಣದ ಅಗತ್ಯವನ್ನು ಹೇಳುತ್ತಾ ಬಂತು. ಅದರಂತೆ 1903ರಲ್ಲಿ ಧಾರವಾಡದಲ್ಲಿ ಬೆನಗಲ್ ರಾಮರಾಯರು, ಕರ್ನಾಟಕದ ಅಗತ್ಯವನ್ನು ಪ್ರತಿಪಾದಿಸಿದರು. 1907ರಲ್ಲಿ ಕನ್ನಡದ ಕುಲಪುರೋಹಿತರೆಂದು ಖ್ಯಾತರಾಗಿದ್ದ ಆಲೂರು ವೆಂಕಟರಾಯರು 'ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನ' ವನ್ನು ವ್ಯವಸ್ಥೆ ಮಾಡಿ ಅದರಲ್ಲಿ ಏಕೀಕರಣದ ಅಗತ್ಯವನ್ನು ಜನರ ಮನಸ್ಸಿನಲ್ಲಿ ಬಿತ್ತಿದರು. 1915ರಲ್ಲಿ ಬೆಂಗಳೂರಿನಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು' ಪ್ರಾರಂಭವಾಗಿ ನಿರಂತರವಾಗಿ ಸಾಹಿತ್ಯ ಸಮ್ಮೇಳನವನ್ನು ನಡೆಸುತ್ತಾ ಕನ್ನಡಿಗರ ಜಾಗೃತಿ ಸಹಾಯ ಮಾಡಿತು. 1920ರಲ್ಲಿ ಧಾರವಾಡದಲ್ಲಿ ನಡೆದ 'ಪ್ರಥಮ ಕರ್ನಾಟಕ ರಾಜಕೀಯ ಪರಿಷತ್ತು' ಏಕೀಕರಣದ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು. 1924ರ ಹೊತ್ತಿಗೆ ಸರ್. ಸಿದ್ದಪ್ಪ ಕಂಬಳಿ ಅವರ ಅಧ್ಯಕ್ಷತೆಯಲ್ಲಿ ಪ್ರಥಮ ಏಕೀಕರಣ ಸಮ್ಮೇಳನವು ಜರುಗಿತು. ಅನಂತರ ಈ ಸಮ್ಮೇಳನವು ನಿರಂತರವಾಗಿ ವಿವಿಧ ನಾಯಕರಗಳ ಅಧ್ಯಕ್ಷತೆಯಲ್ಲಿ ಬಳ್ಳಾರಿ, ಧಾರವಾಡ, ಹುಕ್ಕೇರಿ, ಬೆಳಗಾಂ ಹಾಗೂ ಮುಂಬೈಗಳಲ್ಲಿ ಜರುಗಿ ಏಕೀಕರಣದ ಅಗತ್ಯವನ್ನು ಜನರಿಗೆ ಮನದಟ್ಟು ಮಾಡಿಕೊಡಲು ಪ್ರಯತ್ನ ನಡೆಸಿತ್ತು. ಇವುಗಳ ಫಲವಾಗಿ ಉತ್ತರ ಕರ್ನಾಟಕದಲ್ಲಿ ಏಕೀಕರಣದ ಕೂಗು ದೊಡ್ಡ ಧ್ವನಿಯಲ್ಲಿ ಮೊಳಗಲು ಪ್ರಾರಂಭವಾಗಿತ್ತು. ಆ ಕಾಲದ ಎಲ್ಲಾ ನಾಯಕರು ಏಕೀಕರಣಕ್ಕೆ ಬೆಂಬಲ ಸೂಚಿಸುವ ಅನಿವಾರ್ಯ ಪರಿಸ್ಥಿತಿಯನ್ನು ಉತ್ತರ ಕರ್ನಾಟಕದ ಜನತೆ ಸೃಷ್ಟಿ ಮಾಡಿತ್ತು.

ಸ್ವಾತಂತ್ರ್ಯಾನಂತರ ಕಾಸರಗೋಡಿನಲ್ಲಿ ನಡೆದ ಏಕೀಕರಣ ಸಮ್ಮೇಳನದ ಅಧ್ಯಕ್ಷತೆಯನ್ನು ಅಂದಿನ ಪ್ರಸಿದ್ಧ ಕಾಂಗ್ರೆಸ್ ನಾಯಕರಾದ ಆರ್. ಆರ್. ದಿವಾಕರ್ ವಹಿಸಿದ್ದರು. ಅವರು ಸ್ವಾತಂತ್ರ ಪಡೆದ ನಂತರವೂ ಏಕೀಕರಣ ಆಶಯ ಅನುಷ್ಠಾನವಾಗದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ತಕ್ಷಣ ಕರ್ನಾಟಕ ಏಕೀಕರಣ ಮಾಡುವಂತೆ ಪ್ರಧಾನಿ ಜವಾಹರಲಾಲ್ ನೆಹರು ಅವರನ್ನು ಒತ್ತಾಯ ಮಾಡಿದರು. 1953ರಲ್ಲಿ ದಾವಣಗೆರೆಯಲ್ಲಿ ನಡೆದ ಏಕೀಕರಣ ಸಮ್ಮೇಳನದಲ್ಲಿ ಐದು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಅವರೆಲ್ಲರನ್ನೂ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಕಾರಣಕ್ಕೆ ಅವರನ್ನು ಬಂಧಿಸಲಾಯಿತು. ಇದೇ ಸಮಯದಲ್ಲಿ ಆಂಧ್ರಪ್ರದೇಶದ ಪೊಟ್ಟಿ ಶ್ರೀರಾಮುಲು ಅವರು ಭಾಷಾವಾರು ಪ್ರಾಂತ್ಯರಚನೆಗಾಗಿ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡಿ ಮರಣವನ್ನಪ್ಪಿದರು. ಇದರಿಂದ ಕರ್ನಾಟಕದ ಏಕೀಕರಣದ ಚಳವಳಿಗೆ ಮತ್ತಷ್ಟು ವೇಗ ದೊರೆಯಿತು. ಈ ಘಟನೆ ಇಡೀ ಭಾರತದಾದ್ಯಂತ ವಿದ್ಯುತ್ ಸಂಚಾರದಂತೆ ಹರಡಿ ಕೊನೆಗೆ ಭಾರತ ಸರ್ಕಾರ ಸರ್ಕಾರ ಭಾಷಾವಾರು ಪ್ರಾಂತ್ಯ ರಚನೆಗಾಗಿ ಫಜಲ್ ಆಲಿ ಆಯೋಗವನ್ನು ರಚಿಸಿತು. ಆ ವರದಿಯ ಆಧಾರದ ಮೇಲೆ 1956 ನವೆಂಬರ್ ಒಂದರಂದು ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂತು. ಏಕೀಕರಣದ ನಂತರ ಎಸ್. ನಿಜಲಿಂಗಪ್ಪ ಅವರು ನೂತನ ರಾಜ್ಯದ ಮುಖ್ಯಮಂತ್ರಿಗಳಾದರು. 1973 ನವೆಂಬರ್ 1ರಂದು ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಈ ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿದರು.

ಏಕೀಕರಣದ ಅನಂತರವೂ ಕನ್ನಡದ ಅನೇಕ ಪ್ರದೇಶಗಳು ಹೊರರಾಜ್ಯದಲ್ಲೇ ಉಳಿದಿದೆ. ಸೊಲ್ಲಾಪುರ, ತೆಕ್ಕಲಕೋಟೆ, ಕಾಸರಗೋಡು, ಅದವಾನಿ, ಮಂತ್ರಾಲಯ, ಮಡಕಶಿರಾ ಮೊದಲಾದ ಪ್ರಾಂತ್ಯಗಳಲ್ಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಬೆಳಗಾವಿಯಲ್ಲಿ ಮರಾಠಿಗರು ನಿರಂತರವಾಗಿ ಘರ್ಷಣೆ ಮಾಡುತ್ತಿದ್ದಾರೆ. ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದಾರೆ.

ಎಪ್ಪತ್ತರ ದಶಕದಲ್ಲಿ ಕನ್ನಡದ ಚಲನಚಿತ್ರ ಅಂದಿನ ಮದ್ರಾಸಿನಲ್ಲಿ ಠಿಕಾಣಿ ಹೂಡಿತ್ತು. ಉದ್ಯಮಗಳು ಮದ್ರಾಸ್, ಮುಂಬೈ, ಕಲ್ಕತ್ತಾ ಮೊದಲಾದ ಕಡೆ ಸಮೃದ್ಧವಾಗಿ ಬೆಳೆಯತೊಡಗಿತ್ತು. ಕನ್ನಡಿಗರು ಉದ್ಯೋಗಕ್ಕಾಗಿ ಬೇರೆಬೇರೆ ರಾಜ್ಯಗಳಿಗೆ ವಲಸೆ ಹೋಗಬೇಕಾಗಿತ್ತು.

1980ರಲ್ಲಿ ಜರುಗಿದ ಗೋಕಾಕ್ ಚಳವಳಿ ಕನ್ನಡದ ಭಾಷೆ, ಶಿಕ್ಷಣ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಪ್ರೇರಣೆ ನೀಡಿದ ಘಟನೆಯಾಗಿದೆ. 1983ರ ಅನಂತರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರವು ಕನ್ನಡದ ವಿಚಾರವನ್ನು ತಮ್ಮ ಚುನಾವಣಾ ವಿಷಯವನ್ನಾಗಿ ಮಾಡಿಕೊಳ್ಳುವ ಅನಿವಾರ್ಯ ಸ್ಥಿತಿಯನ್ನು ಈ ಚಳವಳಿ ಸೃಷ್ಟಿ ಮಾಡಿತು.

1992ರ ನಂತರ ಪರಿಸ್ಥಿತಿ ಬದಲಾವಣೆ ಆಯಿತು. ಕರ್ನಾಟಕ ರಾಜ್ಯ ಐ.ಟಿ ಉದ್ಯಮ ಕ್ಷೇತ್ರದ ಕೇಂದ್ರವಾಯಿತು. ಬೆಂಗಳೂರು ವಿಷ್ವಾದ ಸಿಲಿಕಾನ್ ಸಿಟಿ ಎಂದು ಪ್ರಸಿದ್ಧವಾಯಿತು. ಭಾರತದ ಎಲ್ಲ ರಾಜ್ಯಗಳಿಂದಲೂ ಹೊಸ ಪ್ರತಿಭೆಗಳು ಕರ್ನಾಟಕಕ್ಕೆ ಬರತೊಡಗಿದರು. ಇದೊಂದು ಸ್ವಾಗತಾರ್ಹವಾದ ಬೆಳವಣಿಗೆಯಾಗಿದೆ. ಕನ್ನಡ ಚಲನಚಿತ್ರ ಕ್ಷೇತ್ರ ಹೊಸ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿತು. ಇಂದು ಕನ್ನಡ ಚಲನಚಿತ್ರ ರಾಷ್ಟ್ರ ಮಟ್ಟದಲ್ಲಿ ಮಾತ್ರವಲ್ಲ ಅಂತಾರಾಷ್ಟ್ರೀಯ ಮಟ್ಟದಲ್ಲೂ ಖ್ಯಾತಿ ಪಡೆದಿದೆ. ಇನ್ನೂ ಕ್ರೀಡೆಯಲ್ಲೂ ಸಹ ಕರ್ನಾಟಕದ ಪ್ರತಿಭೆಗಳು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

ಇಂದು ಕನ್ನಡಿಗರ ವಿವಿಧ ಸಮಸ್ಯೆಗಳಿಗೆ ಹೊಸ ಆಯಾಮಗಳು ದೊರಕಿವೆ. ಕರ್ನಾಟದಲ್ಲಿ ಕನ್ನಡದ ಶಾಲೆಗಳು ಮುಚ್ಚುತ್ತಿವೆ. ಕರ್ನಾಟಕದಲ್ಲಿ ಹೊಸ ಉದ್ಯಮಗಳು ಪ್ರಾರಂಭವಾಗುತ್ತಿದ್ದರೂ ಪ್ರತಿಭಾವಂತ ಕನ್ನಡಿಗರು ನಿರಂತರವಾಗಿ ವಿದೇಶಕ್ಕೆ ವಲಸೆ ಹೋಗುತ್ತಿದ್ದಾರೆ. ಸ್ಥಳೀಯರಿಗೂ ಸಮರ್ಪಕವಾದ ಉದ್ಯೋಗ ದೊರೆಯುತ್ತಿಲ್ಲವೆಂದು ಅನೇಕರು ಅಭಿಪ್ರಾಯ ಪಡುತ್ತಾರೆ.

ಕನ್ನಡ ಶಿಕ್ಷಣ ಮಾಧ್ಯಮವಾಗದ ಕಾರಣ ಈ ಭಾಷೆ ಬಹುಬೇಗ ಮನೆ ಮಾತಾಗಿ ಅಥವಾ ಆಡುಭಾಷೆಯಾಗಿ ಉಳಿದುಕೊಳ್ಳುತ್ತದೆ ಎಂದು ಭಾಷಾತಜ್ಞರು ಹೇಳತೊಡಗಿದ್ದಾರೆ. ಶಿಕ್ಷಣ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಕನ್ನಡದ ಸ್ಥಾನ ಕಿರಿದಾಗುತ್ತಾ ಬಂದಿದೆ. ಕನ್ನಡ ಕೇವಲ ಸರ್ಕಾರದ ಪ್ರೋತ್ಸಾಹದಲ್ಲಿ ಬೆಳೆಯುವ ಭಾಷೆಯಾಗಬಾರದು. ಅದು ಜನರ ಮನಸ್ಸಿನಲ್ಲಿ ಬೆಳೆಯುವ ಭಾಷೆಯಾಗಬೇಕು. ಕನ್ನಡದಿಂದ ಮಾತ್ರ ನಮಗೆ ಮುಕ್ತಿ ಎನ್ನುವ ಭಾವನೆ ಪ್ರತಿಯೊಬ್ಬ ಕನ್ನಡಿಗನಲ್ಲೂ ಮೂಡದ ತನಕ ವೇದಿಕೆಯ ರಾಜ್ಯೋತ್ಸವದ ಆಚರಣೆಗೆ ಅರ್ಥವಿರುವುದಿಲ್ಲ.

■ ನಿರೂಪಣೆ: ಶ್ರೀವತ್ಸ

**ಶ್ರೀದೇವಿ ಹಾಗೂ ರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ**

# ಮಾನಸಿಕ ಆರೋಗ್ಯ ಸರ್ಕಾರದ ಪ್ರಥಮ ಆದ್ಯತೆಯಾಗಲಿ



■ ಕೆ. ಎಸ್. ರಾಜಮನ್ನಾರ್

"ಮಾನಸಿಕ ಆರೋಗ್ಯ ಮನಸ್ಸಿನ ಭಾವನೆ, ಆಲೋಚನೆ, ನಡವಳಿಕೆಗಳನ್ನು ಸೂಚಿಸುತ್ತದೆ. ಮಾನಸಿಕ ಆರೋಗ್ಯ ಕಾಪಾಡುವುದೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಥಮ ಆದ್ಯತೆಯಾಗಬೇಕು. ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ನೂತನ ಮಾನಸಿಕ ಆರೋಗ್ಯ ನೀತಿಯೂ ಜಾರಿಯಾಗಬೇಕಿದೆ"– ಈ ಮಾತನ್ನು ಹೇಳಿದವರು ನಿಮಾನ್ಸ್ ಸಂಸ್ಥೆಯ ನಿವೃತ್ತ ಮುಖ್ಯ ನರ್ಸಿಂಗ್ ಅಧಿಕಾರಿ ಪ್ರೊ. ಪಿ.ವಿ. ಮೋಹನ್ ಕೃಷ್ಣ. ಸಂದರ್ಭ: ತುಮಕೂರಿನ ಶ್ರೀದೇವಿ ನರ್ಸಿಂಗ್ ಕಾಲೇಜು ನವೆಂಬರ್ 7 ರಂದು ಏರ್ಪಡಿಸಿದ್ದ ಪದವಿ ಪ್ರದಾನ ಸಮಾರಂಭ. ಅವರು ಅಲ್ಲಿ ಮಾನಸಿಕ ಆರೋಗ್ಯ ಎಷ್ಟು ಮುಖ್ಯ ಎಂಬುದನ್ನು ವಿವರವಾಗಿ ಬಿಡಿಸಿಟ್ಟರು.

"ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ದೇಶದಲ್ಲಿ ಶೇಕಡಾ 25ಕ್ಕಿಂತ ಹೆಚ್ಚು ಜನರು ವಿವಿಧ ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಮಾನಸಿಕ ರೋಗಿಗಳನ್ನು ಪತ್ತೆಹಚ್ಚಿ ಅವರಿಗೆ ಚಿಕಿತ್ಸೆ ಮತ್ತು ಪುನರ್ವಸತಿ ಕಲ್ಪಿಸುವುದರಲ್ಲಿ ಮೂರು ಹಂತಗಳಿವೆ. ಮೊದಲನೆಯದು ಪ್ರೈಮರಿ ಪ್ರಿವೆನ್ಷನ್. ಮೊದಲ ಹಂತದಲ್ಲಿ ಮಾನಸಿಕ ರೋಗಿಗಳನ್ನು ಪತ್ತೆಮಾಡಬೇಕು. ಎರಡನೆಯ ಹಂತದಲ್ಲಿ ಅವರಿಗಿರುವ ಸಮಸ್ಯೆಗಳನ್ನು ಪತ್ತೆ ಮಾಡಿ ಅವರ ಜಾಗದಲ್ಲೇ ಚಿಕಿತ್ಸೆ ನೀಡಬೇಕು. ಇದನ್ನು ಮೀರಿದ ಮಾನಸಿಕ ರೋಗಿಗಳನ್ನು ನಿಮಾನ್ಸ್‌ನಂತಹ ಮಾನಸಿಕ ನರರೋಗ ಆಸ್ಪತ್ರೆಗಳಿಗೆ ಕರೆತಂದು ಚಿಕಿತ್ಸೆ ಕೊಡಿಸಬೇಕಾಗುತ್ತದೆ. ಮಾನಸಿಕ ರೋಗಿಗಳ ಬಗ್ಗೆ ಸಮಾಜದಲ್ಲಿ ಬೇರೂರಿರುವ, ಮೂಢನಂಬಿಕೆಗಳನ್ನು ನಿವಾರಿಸಬೇಕಿದೆ. ಒಮ್ಮೆ ಮನೋರೋಗ ಕಾಣಿಸಿಕೊಂಡರೆ ಇದು ವಾಸಿಯಾಗುವುದಿಲ್ಲ ಎಂಬ ಕಲ್ಪನೆಯಿದೆ. ಮಾನಸಿಕ ಸಮಸ್ಯೆ ಇರುವ ಕುಟುಂಬಗಳ ಜೊತೆ ಸಂಬಂಧ ಬೆಳೆಸಬಾರದು ಎಂಬ ಮೂಢನಂಬಿಕೆ ಇಂದಿಗೂ ಜನರಲ್ಲಿ ಮನೆ ಮಾಡಿದೆ. ಇಂದು ಮಕ್ಕಳಿಂದ ಹಿಡಿದು ವಯಸ್ಕರವರೆಗೆ ಒಂದಲ್ಲ ಒಂದು ರೀತಿ ಮಾನಸಿಕ ಒತ್ತಡದಿಂದ ಬಳಲುತಿರುತ್ತಾರೆ. ಅವರನ್ನು ಈ ಸಮಸ್ಯೆಗಳಿಂದ ಹೊರಗೆ ತರಲು ಟೆಲಿಕೌನ್ಸಿಲಿಂಗ್, ಟೆಲಿಮಾನಸ ಮತ್ತು ಆಪ್ತಸಮಾಲೋಚನೆ ಬಹಳ ಅಗತ್ಯವಾಗಿದೆ. ಶಾಲೆಗಳಲ್ಲೂ ವಿದ್ಯಾರ್ಥಿ ಮತ್ತು ಟೀಚರ್‌ಗಳು ಸಹ ಒತ್ತಡದಿಂದ ಮುಕ್ತವಾದ ವಾತವರಣದಲ್ಲಿ ಕೆಲಸ ಮಾಡುವಂತಹ ಅವಕಾಶ. ಕಲ್ಪಿಸಬೇಕಿದೆ.

"ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಆತ್ಮಹತ್ಯೆಯ ಪ್ರವೃತ್ತಿ ಹೆಚ್ಚಾಗುತ್ತಿದೆ. ಮಾನಸಿಕ ಒತ್ತಡ, ಖಿನ್ನತೆ, ವಯಸ್ಕರು, ಮಹಿಳೆಯರು, ಮಕ್ಕಳು, ವಿದ್ಯಾರ್ಥಿಗಳು, ಶಿಕ್ಷಕರು ಹೀಗೆ ಸಮಾಜದ ಎಲ್ಲ ವರ್ಗದ ಜನರನ್ನು ಕಾಡುತ್ತಿದೆ. ಹೀಗಾಗಿ ಒತ್ತಡ ಮುಕ್ತ ಜೀವನ ನಡೆಸಲು ಮಾನಸಿಕ ಆರೋಗ್ಯವನ್ನು ಕಾಪಾಡಬೇಕಿದೆ. ಜಿಲ್ಲೆ, ತಾಲ್ಲೂಕು ಮತ್ತು ಹಳ್ಳಿಗಳಲ್ಲೂ ಮಾನಸಿಕ ಆರೋಗ್ಯ ಸೇವೆ ಕಲ್ಪಿಸುವುದು ಅತಿಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾನಸಿಕ ಆರೋಗ್ಯ ನೀತಿಯನ್ನು ಜಾರಿಗೊಳಿಸಬೇಕಾಗಿದೆ" ಎಂದರು.

ಸಮಾರಂಭದಲ್ಲಿ ಜೀವಮಾನ ಸಾಧನೆಯ ಪ್ರಶಸ್ತಿ ಸ್ವೀಕರಿಸಿದ ಡಾ. ಪಟಲಯ್ಯ, ಅವರು "ದೇಶದಲ್ಲಿ ಮತ್ತು ವಿದೇಶದಲ್ಲಿ ನರ್ಸಿಂಗ್ ಹುದ್ದೆಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಹೀಗಾಗಿ ವಿದ್ಯಾರ್ಥಿಗಳು ಕೌಶಲವನ್ನು ವೃದ್ಧಿಪಡಿಸಿಕೊಂಡರೆ, ಎಲ್ಲಿ ಬೇಕಾದರೂ ಉತ್ತಮ ಜೀವನ ನಡೆಸಬಹುದು" ಎಂದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಅವರು "ಸಮುದಾಯ ಆರೋಗ್ಯ ಕಾಪಾಡುವಲ್ಲಿ ನರ್ಸ್‌ಗಳ ಪಾತ್ರ ಬಹಳ ಮುಖ್ಯವಾಗಿದೆ. ಇಂದು ಅವರಿಗೆ ಬೇಕಾದಷ್ಟು ಉದ್ಯೋಗಾವಕಾಶಗಳು ಲಭ್ಯವಾಗುತ್ತಿದೆ. ಎಲ್ಲಕ್ಕಿಂತ ಮಾನವೀಯತೆ, ಅನುಕಂಪ ಕರುಣೆಯೇ ವೃತ್ತಿ ಮತ್ತು ಬದುಕಿನ ಗುರಿಯಾಗಬೇಕು" ಎಂದರು.

ವೈದ್ಯಕೀಯ ಕಾಲೇಜಿನ ಮೆಡಿಕಲ್ ಡೈರೆಕ್ಟರ್ ಡಾ. ರಮಣ್ ಎಂ. ಹುಲಿನಾಯ್ಕರ್ ಅವರು "ಸಮುದಾಯ ಆರೋಗ್ಯ ಸೇವೆ ಕಾಪಾಡುವಲ್ಲಿ ನರ್ಸ್‌ಗಳ ಪಾತ್ರ ಪ್ರಮುಖವಾಗಿದೆ. ಅವರು ರೋಗಿಗಳ ಮತ್ತು ವೈದ್ಯರ ನಡುವೆ ಅವರು ಸಂಪರ್ಕದ ಕೊಂಡಿಯಾಗಿರುತ್ತಾರೆ. ಆರೋಗ್ಯಪೂರ್ಣ ಸಮಾಜ ಕಟ್ಟುವಲ್ಲಿ ವೈದ್ಯರಿಗಿಂತಲೂ ಮಿಗಿಲಾದ ಜವಾಬ್ದಾರಿ ಮತ್ತು ಕರ್ತವ್ಯವನ್ನು ನರ್ಸ್‌ಗಳು ನಿರ್ವಹಿಸುತ್ತಿದ್ದಾರೆ. ಪದವಿ ಮುಗಿಸಿ ಹೊರಹೋಗುತ್ತಿರುವ ವಿದ್ಯಾರ್ಥಿಗಳು ಮಾದಕವ್ಯಸನಗಳಿಗೆ ಬಲಿಯಾಗದೆ ಉತ್ತಮ ಜೀವನವನ್ನು ನಡೆಸಬೇಕು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವಿವಿಧ ರಾಜ್ಯಗಳ ಮತ್ತು ಅನೇಕ ಹೊರದೇಶಗಳ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಹೋಗುತ್ತಿರುವ ವಿದ್ಯಾರ್ಥಿಗಳು ಕಾಲೇಜಿನ ಜೊತೆ ಒಡನಾಟವನ್ನು ಇಟ್ಟುಕೊಂಡು ಕಿರಿಯ ವಿದ್ಯಾರ್ಥಿಗಳಿಗೆ ತಮ್ಮ ಅನುಭವವನ್ನು ಧಾರೆ ಎರೆಯಬೇಕು" ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ನರ್ಸಿಂಗ್ ಕಾಲೇಜಿನ 102 ಹಾಗೂ ರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ 60 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 162 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್, ಶ್ರೀದೇವಿ ಚಾರಿಟೇಬಲ್ ಟ್ರಸ್ಟ್ ಹಾಗೂ ನೇತ್ರತಜ್ಞೆ ಡಾ. ಲಾವಣ್ಯ, ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್.ಕೆ. ಮುನಿಸ್ವಾಮಿ, ಪ್ರೊ. ಎಸ್. ಉಷಾ. ಪ್ರೊ. ಅಂಬಾ ಮೊದಲಾದವರು ಭಾಗಿಯಾಗಿದ್ದರು.


**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**
ಪುಟ ವಿನ್ಯಾಸ:
**ಸುಮಾ ಸಾಗರ್**

# ಸಾಧಕರೊಬ್ಬರು ದೂರವಿದ್ದರೂ ನಮ್ಮವರಾದರು

▪ ಡಾ. ಎಂ.ಆರ್. ಹುಲಿನಾಯ್ಕರ್



ಶ್ರೀದೇವಿ ಕುಟುಂಬ ವರ್ಗದಿಂದ ಡಾ. ವಿಕಾಸ ಮಹಾತ್ಮೆ ಅವರಿಗೆ ಸನ್ಮಾನ.


2016ರಲ್ಲಿ ದೆಹಲಿಯಲ್ಲಿ ಅಖಿಲ ಭಾರತ ಶಫರ್ಡ್ ಸಮುದಾಯದ ಸಮ್ಮೇಳನವೊಂದು ಜರುಗಿತ್ತು. ಪ್ರತಿನಿಧಿಯಾಗಿ ಅದಕ್ಕೆ ನಾನು ಹೋಗಿದ್ದೆ. ಅಚಾನಕ್ಕಾಗಿ ಆ ಸಮ್ಮೇಳನಕ್ಕೆ ಬಂದಿದ್ದ ಮಹಾರಾಷ್ಟ್ರದ ನಾಗಪುರದ ನೇತ್ರಶಾಸ್ತ್ರಜ್ಞರಾದ ಡಾ ವಿಕಾಸ ಮಹಾತ್ಮೆ ಅವರ ಪರಿಚಯವಾಯಿತು, ನಾವಿಬ್ಬರು ವೃತ್ತಿ ಬಾಂಧವರು. ಹೀಗಾಗಿ ಬಹುಬೇಗ ಆತ್ಮೀಯತೆ ಬೆಳೆಯಿತು. ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲೂ ನಾವು ಸಮಾನ ರೀತಿಯ ಆಸಕ್ತಿ ಹೊಂದಿದ್ದೆವು.

ಈ ಮಧ್ಯೆ ನಾವು ಅಲ್ಲಲ್ಲಿ ಭೇಟಿಯಾಗಿ ಜ್ವಲಂತ ಸಮಸ್ಯೆಗಳನ್ನು ಚರ್ಚಿಸುತ್ತಿದ್ದೇವು. ಡಾ.ವಿಕಾಸ ಮಹಾತ್ಮೆ ಅವರು ಶ್ರೀದೇವಿ ವೈದ್ಯಕೀಯ ಮತ್ತು ಸಂಶೋಧನಾ ಕಾಲೇಜಿನ ಪದವೀ ಪ್ರದಾನ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಯುವ ವೈದ್ಯರಿಗೆ ಮಹತ್ತ್ವದ ಸಂದೇಶ ನೀಡಿದ್ದರು.

ಅಕ್ಟೋಬರ್ 17, 2025ರಂದು ನನ್ನ ಆತ್ಮಕಥನದ ಇಂಗ್ಲಿಷ್ ಆವೃತ್ತಿ Reminiscences and Reflections ಬಿಡುಗಡೆಯ ಸಮಾರಂಭಕ್ಕೆ ಡಾ. ವಿಕಾಸ ಮಹಾತ್ಮೆ ಅವರು ದೂರದ ನಾಗಪುರದಿಂದ ಬಂದು, ಸಮಾರಂಭದಲ್ಲಿ ಲೋಕಾರ್ಪಣೆಯಾದ ಕೃತಿಯ ಮೊದಲ ಪ್ರತಿಯನ್ನು ಸ್ವೀಕರಿಸಿದರು. ನಂತರ ಅವರು ಸಮಾರಂಭದಲ್ಲಿ ಅದ್ಭುತವಾಗಿ ಮಾತನಾಡಿದರು. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವೈದ್ಯರ ಮಹತ್ವವನ್ನು ಅವರು ಸಭಿಕರಿಗೆ ಸಮರ್ಥವಾಗಿ ಮುಟ್ಟಿಸಿದರು. ಅವರ ಮಾತುಗಳಲ್ಲಿ ರಾಷ್ಟ್ರೀಯತೆಗೆ ಹೆಚ್ಚಿನ ಒತ್ತು ನೀಡಲಾಗಿತ್ತು.

ಡಾ. ವಿಕಾಸ ಮಹಾತ್ಮೆ ಅವರು ಬದುಕಿನಲ್ಲಿ ಬಹುದೊಡ್ಡ ಹೋರಾಟವನ್ನು ನಡೆಸಿ ಈ ಹಂತಕ್ಕೆ ತಲುಪಿದ್ದಾರೆ. ಕುರುಬ ಸಮಾಜದದಲ್ಲಿ ಜನಿಸಿರುವ ಅವರು ತಮ್ಮ ಪ್ರತಿಭೆಯಿಂದ ಎಲ್ಲವನ್ನು ಪಡೆದು ಕೊಂಡಿದ್ದಾರೆ. ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ Wathodashukleshwar ದಲ್ಲಿ 1957 ಡಿಸೆಂಬರ್ 11ರಂದು ಡಾ. ವಿಕಾಸ ಮಹಾತ್ಮೆ ಅವರು ಜನಿಸಿದರು. ಅವರ ತಂದೆ ಹರಿಬಾಬು ಮಹಾತ್ಮೆ ಅವರು ಕೇಂದ್ರ ಸರ್ಕಾರದ ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ತಾಯಿ ಶ್ರೀಮತಿ ಕಮಲ ಸದ್ಗೃಹಿಣಿ. ಇವರಿಗೆ ಇಬ್ಬರು ಸೋದರರು ಮತ್ತು ಇಬ್ಬರು ಸಹೋದರಿಯರು ಇದ್ದಾರೆ.

ಡಾ. ವಿಕಾಸ ಮಹಾತ್ಮೆ ಪ್ರಾರಂಭದ ಶಿಕ್ಷಣವು ನಾಗಪುರದಲ್ಲಿ ಜರುಗುತ್ತದೆ. ಇವರ ಶೈಕ್ಷಣಿಕ ರೆಕಾರ್ಡ್ ಅತ್ಯುತ್ತಮವಾಗಿದೆ. ವಿಕಾಸ ಮಹಾತ್ಮೆ ಅವರು ಪ್ರತಿಭಾವಂತ ವಿದ್ಯಾರ್ಥಿ. ಎಲ್ಲ ತರಗತಿಗಳಲ್ಲೂ ಪ್ರಥಮ ಸ್ಥಾನದಲ್ಲೇ



ಮುಂದುವರಿದಿದ್ದಾರೆ. ಜೊತೆಗೆ ಇಂಗ್ಲೀಷ್, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದಾರೆ. ವಿಶೇಷ ಆಸಕ್ತಿ ವಹಿಸಿ ಸಂಸ್ಕೃತ ಭಾಷೆಯನ್ನು ಕಲಿತು, ಅದರಲ್ಲಿ ಸ್ವತಂತ್ರವಾಗಿ ಮಾತನಾಡುವ ಲೇಖನ ವ್ಯವಸಾಯ ಮಾಡುವ ಸಾಮರ್ಥ್ಯವನ್ನು ಕೂಡ ಪಡೆದಿದ್ದಾರೆ. ಟೇಬಲ್ ಟೆನ್ನಿಸ್ ಅವರ ಅಚ್ಚುಮೆಚ್ಚಿನ ಕ್ರೀಡೆ. ವಿದ್ಯಾರ್ಥಿ ದೆಸೆಯಿಂದಲೂ ಅವರಿಗೆ ವ್ಯಾಸಂಗ ಅಭಿರುಚಿ ಒಲಿದು ಬಂದಿದೆ. ಎಲ್ಲ ತರಹದ ಪುಸ್ತಕಗಳನ್ನು ಸಂಗ್ರಹಿಸುವುದು ಮಾತ್ರವಲ್ಲದೆ ಅದನ್ನು ಓದುವ ಹವ್ಯಾಸವನ್ನೂ ಬೆಳೆಸಿಕೊಂಡಿದ್ದಾರೆ.

ತಮ್ಮ ಶೈಕ್ಷಣಿಕ ಪ್ರತಿಭೆಯಿಂದಲೇ 1979ರಲ್ಲಿ ಎಂ.ಬಿ.ಬಿ.ಎಸ್‌ಗೆ ಸೀಟ್ ಪಡೆದರು. ನಾಗಪುರ ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ಇವರು ವೈದ್ಯಕೀಯ ಪದವಿ ಪಡೆದರು. 1983ರಲ್ಲಿ ನೇತ್ರ ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಎಂ.ಎಸ್. ಸ್ನಾತಕೋತ್ತರ ಪದವಿ ಪಡೆದರು. ನಾಗಪುರ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಸ್ನಾತಕೋತ್ತರ ವಿಭಾಗದಲ್ಲಿ ಮೊದಲಿಗರಾಗಿ ಹೊರಹೊಮ್ಮಿದರು.

ಪ್ರಾರಂಭದಲ್ಲಿ ನಾಗಪುರ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ತಾತ್ಕಾಲಿಕವಾಗಿ ಉಪನ್ಯಾಸಕರಾಗಿ ಕೆಲಸಕ್ಕೆ ಸೇರುತ್ತಾರೆ. ಅಲ್ಲಿಗೆ ಖಾಯಂ ನೌಕರರು ಬಂದಾಗ ಇವರು ನಿರುದ್ಯೋಗಿಗಳಾಗುತ್ತಾರೆ. ಆದರೆ ವಿಕಾಸ ಮಹಾತ್ಮೆ ಅವರು ಎದೆಗುಂದುವುದಿಲ್ಲ. ಅಲ್ಲಿಂದ ಮುಂದೆ ಡಾ. ವಿಕಾಸ ಮಹಾತ್ಮೆ ಅವರು ನಡೆಸಿದ



ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ಪಾಟೀಲ್ ಅವರಿಂದ ಪದ್ಮಶ್ರೀ ಪುರಸ್ಕಾರ ಪಡೆಯುತ್ತಿರುವ ಡಾ.ವಿಕಾಸ ಮಹಾತ್ಮೆ.

ಹೋರಾಟ ಅತ್ಯಂತ ಮನನೀಯವಾದದ್ದು. ಜೇಬಿನಲ್ಲಿನಲ್ಲಿ ಹಣವಿಲ್ಲ. ಸಹಾಯ ಮಾಡಲು ಪ್ರಭಾವಶಾಲಿ ವ್ಯಕ್ತಿಗಳಿಲ್ಲ. ಆದರೂ ಡಾ.ವಿಕಾಸ್ ಮಹಾತ್ಮೆ ಅವರ ಮುಂದೆ ದೊಡ್ಡ ಗುರಿಯಿರುತ್ತದೆ. ಏಕಾಂಗಿಯಾಗಿ ನಾಗಪುರದಲ್ಲಿ 'ಮಹಾತ್ಮೆ ಐ ಆಸ್ಪತ್ರೆ'ಯನ್ನು ಪ್ರಾರಂಭ ಮಾಡುತ್ತಾರೆ. ಮೊದಲಿಗೆ ಈ ಆಸ್ಪತ್ರೆಯಲ್ಲಿ ಆರು ಹಾಸುಗೆಗಳು ಮಾತ್ರವಿರುತ್ತದೆ. ನಂತರ ಆಸ್ಪತ್ರೆ ಬೆಳೆಯುತ್ತಾ ಹೋಗುತ್ತದೆ. ಕೊನೆಗೆ 100 ಹಾಸಿಗೆಗಳ ಸುಸಜ್ಜಿತ ನೇತ್ರರೋಗದ ಆಸ್ಪತ್ರೆ ನಿರ್ಮಾಣವಾಗುತ್ತದೆ. ಇದರ ಜೊತೆಗೆ SMM Eye Welfare Charitable Trust and Mahatme Eye Bank ಗಳು ಪ್ರಾರಂಭವಾಗುತ್ತದೆ.

ಸಮುದಾಯದಲ್ಲಿ ಯಾರೂ ಅಂಧರಿರಬಾರದು. ಕ್ಯಾಟ್‌ರ್ಯಾಕ್ಟ್‌ನಿಂದ ಯಾರೂ ಕಣ್ಣು ಕಳೆದುಕೊಳ್ಳಬಾರದು ಎನ್ನುವ ಧ್ಯೇಯವುಳ್ಳ ಡಾ. ವಿಕಾಸ ಮಹಾತ್ಮೆ ಅವರು ಕ್ಯಾಟ್‌ರ್ಯಾಕ್ಟ್ ಸರ್ಜರಿಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ. ತರುಣ ನೇತ್ರ ಶಸ್ತ್ರಚಿಕಿತ್ಸಕರುಗಳಿಗೆ ಮಾರ್ಗದರ್ಶಕರಾಗಿದ್ದಾರೆ. ಶಸ್ತ್ರಚಿಕಿತ್ಸೆಗೆ ಆವಶ್ಯಕವಾದ ಅನೇಕ ವೈದ್ಯಕೀಯ ಉಪಕರಣಗಳನ್ನು ಬಳಸಿ ಕ್ಯಾಟ್‌ರ್ಯಾಕ್ಟ್ ಆಪರೇಷನ್ ಅತ್ಯಂತ ಸುಲಭವಾಗಿ ಮಾಡಬಹುದು ಮತ್ತು ಅದರಿಂದ ರೋಗಿಗಳಿಗೆ ಯಾವುದೇ ರೀತಿಯ ಅಡ್ಡಪರಿಣಾಮ ಬೀರುವುದಿಲ್ಲ ಎನ್ನುವುದನ್ನು ಸಾಧಿಸಿ ತೋರಿಸಿದ್ದಾರೆ. ಡಾ. ವಿಕಾಸ್ ಮಹಾತ್ಮೆ ಅವರು ಈ ತನಕ 2.25 ಲಕ್ಷ ನೇತ್ರಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಇದೊಂದು ರಾಷ್ಟ್ರಮಟ್ಟದ ದಾಖಲೆಯಾಗಿರುತ್ತದೆ. ಅದರಲ್ಲಿ 1.25 ಲಕ್ಷ ಶಸ್ತ್ರಚಿಕಿತ್ಸೆಯನ್ನು ಅರ್ಹರಿಗೆ ಉಚಿತವಾಗಿ ಮಾಡಿದ್ದಾರೆ.

ಡಾ. ವಿಕಾಸ ಮಹಾತ್ಮೆ ಅವರ ಕಣ್ಣಿನ ಆಸ್ಪತ್ರೆಯು ನಾಗಪುರ ಅಲ್ಲದೆ ಮುಂಬೈ, ಅಮರಾವತಿ ಮತ್ತು ಪುಣೆ ನಗರಗಳಲ್ಲೂ ಇದೆ. 'ಮಹಾತ್ಮೆ ಐ ಬ್ಯಾಂಕ್ ಆಸ್ಪತ್ರೆ'ಯನ್ನು ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರವನ್ನಾಗಿ ಮಾನ್ಯ ಮಾಡಿದೆ. ಇಲ್ಲಿ ಇಂಟರ್ ನ್ಯಾಷನಲ್ ಫೆಲೋಶಿಪ್, ಡಿ.ಎನ್.ಬಿ, ಡಿ.ಓ.ಎಂ.ಎಸ್ ಮತ್ತು ಎಂ ಎಸ್ ಕೋರ್ಸ್‌ಗಳನ್ನು ಮಾಡಬಹುದು. ಭಾರತ ಸರ್ಕಾರ ಇವರ ಆಸ್ಪತ್ರೆಯನ್ನು ಕಣ್ಣಿನ ಶಸ್ತ್ರಚಿಕಿತ್ಸಾ ವೈದ್ಯರ ತರಬೇತಿ ಕೇಂದ್ರವನ್ನಾಗಿ ಮಾನ್ಯತೆ ಮಾಡಿದೆ. ಈ ಸಂಸ್ಥೆ ಗ್ರಾಮೀಣ ಯುವಕರಿಗಾಗಿ ಆಪ್ತಾಲ್ಮಿಕ್ ಟೆಕ್ನಿಷಿಯನ್ ಕೋರ್ಸ್ (Ophthalmic Technical Course) ಪ್ರಾರಂಭ ಮಾಡಿದೆ. ಇದರಿಂದ ಗ್ರಾಮೀಣ ಪ್ರದೇಶದ ಅನೇಕ ಯುವಕರಿಗೆ ಉದ್ಯೋಗ ದೊರೆಯುತ್ತಿದೆ.

ಡಾ. ವಿಕಾಸ ಮಹಾತ್ಮೆಯವರು 'ಅರ್ಹರಿಗೆ ಮೀಸಲಾತಿ ದೊರೆಯಬೇಕು' ಎಂದು ಮಹಾರಾಷ್ಟ್ರದಲ್ಲಿ ನಡೆದ ಚಳವಳಿಯ ನೇತೃತ್ವವನ್ನು ವಹಿಸಿದ್ದರು. ಕುರುಬ ಸಮುದಾಯಕ್ಕೆ ಪರಿಶಿಷ್ಟ ವರ್ಗದ ಮಾನ್ಯತೆ ದೊರೆಯಬೇಕೆಂದು ಅವರು ರಾಷ್ಟ್ರಮಟ್ಟದಲ್ಲಿ ಪ್ರತಿಪಾದಿಸುತ್ತಾ ಬಂದಿದ್ದಾರೆ. ಎಲ್ಲಾ ಹಿಂದುಳಿದವರ್ಗದ ಚಳವಳಿಯಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ.

ಡಾ. ವಿಕಾಸ ಮಹಾತ್ಮೆ ಅವರ ವೈದ್ಯಕೀಯ ಮತ್ತು ಸಾಮಾಜಿಕ ಸೇವೆಯನ್ನು ಗಮನಿಸಿದ ಬಿಜೆಪಿ ಪಕ್ಷವು 2016ರಲ್ಲಿ ಅವರನ್ನು ರಾಜ್ಯಸಭೆಗೆ ಕಳುಹಿಸಿತು. ಹೀಗೆ ರಾಜ್ಯಸಭೆಗೆ ನಾಮಕರಣ ನಾಮಕರಣಗೊಂಡ ಕುರುಬ ಸಮಾಜದ ಮೊದಲ ಬುದ್ಧಿಜೀವಿಯಾಗಿ ಡಾ. ವಿಕಾಸ ಮಹಾತ್ಮೆ ಕಂಗೊಳಿಸುತ್ತಾರೆ. ರಾಜ್ಯಸಭೆಯ ಕಲಾಪಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವೈದ್ಯಕೀಯ ಕ್ಷೇತ್ರದ ಬೆಳವಣಿಗೆಗೆ ಅಮೂಲ್ಯ ಕಾಣಿಕೆ ನೀಡಿರುತ್ತಾರೆ. ಜೊತೆಗೆ ಅನೇಕ ಹಿಂದುಳಿದ ವರ್ಗದ ಸಮುದಾಯದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೂ ತಂದಿದ್ದಾರೆ. ರಾಜ್ಯಸಭೆಯ ಸದಸ್ಯರಾಗಿ The Reservation for Right People ಎನ್ನುವ ಖಾಸಗಿಯಾಗಿ ಮಸೂದೆಯೊಂದನ್ನು ಮಂಡಿಸಿದ್ದರು. ಈ ಮಸೂದೆ ಅನೇಕರ ಗಮನ ಸೆಳೆದಿತ್ತು. ಸರ್ಕಾರ ಕೂಡ ಇದರ ಬಗ್ಗೆ ಚಿಂತನೆ ಮಾಡುವುದಾಗಿ ತಿಳಿಸಿದೆ

ಡಾ. ಮಹಾತ್ಮೆ ಅವರು 'ಇನ್ಸಿಟ್ಯೂಟ್ ಆಫ್ ಸೈನ್ಸ್ ಆಫ್ ಹ್ಯಾಪಿನೆಸ್' (Institute of Science of Happiness) ಎನ್ನುವ ಸಂಸ್ಥೆಯ ಮೂಲಕ 'ನಿಜವಾದ ಆನಂದ ಎಲ್ಲಿದೆ' 'ಭಾವನಾತ್ಮಕ ಆರೋಗ್ಯ ಎಂದರೆ ಏನು,' 'ಮನಸ್ಸು ಮತ್ತು ಆರೋಗ್ಯದ ನಡುವೆಯಿರುವ ಸಂಬಂಧ ಎಂತಹುದು' ಮೊದಲಾದ ವಿಷಯಗಳನ್ನು ಕುರಿತು ಹತ್ತಾರು ಉಪನ್ಯಾಸಗಳನ್ನು ತಜ್ಞರಿಂದ ಏರ್ಪಡಿಸಿರುತ್ತಾರೆ.

ಸುಸ್ಥಿರ ಮತ್ತು ಆರೋಗ್ಯಕರ ಸಮಾಜ ನಿರ್ಮಾಣ ಮಾಡಬೇಕಾದರೆ ಸಮುದಾಯದಲ್ಲಿರುವ ಮದ್ಯಪಾನದ ಚಟದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ವೈದ್ಯರಾಗಿ ಡಾ. ಮಹಾತ್ಮೆ ಪ್ರತಿಪಾದಿಸುತ್ತಾರೆ. ಸಮಾಜದ ಆರೋಗ್ಯ ದೃಷ್ಟಿಯಿಂದ ಸರ್ಕಾರಗಳು ಮದ್ಯಪಾನ ಕುರಿತಾದ ಪರಿಷ್ಕೃತವಾದ ಅಬಕಾರಿ ನೀತಿಯನ್ನು ಜಾರಿಗೆ ತರಬೇಕೆಂದು ಅವರು ಒತ್ತಾಯ ಮಾಡುತ್ತಾರೆ.

ದೇಶದ ಅಭಿವೃದ್ಧಿಯ ಜೊತೆಗೆ ರಾಜಕೀಯ ಕ್ಷೇತ್ರದಲ್ಲಿ ಸುಧಾರಣೆಯಾಗಬೇಕು ಎನ್ನುವ ಪ್ರಬಲವಾದ ಆಶಯ ಡಾ. ವಿಕಾಸ ಮಹಾತ್ಮೆ ಅವರದು. ಆಧುನಿಕ ಚುನಾವಣಾ ವ್ಯವಸ್ಥೆಯಿಂದ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಲು ಸಾಧ್ಯವಿಲ್ಲವೆಂದು ಅವರು ಹೇಳುತ್ತಾರೆ. ನೈತಿಕ ತತ್ತ್ವದ ತಳಹದಿಯ ಮೇಲೆ ರಾಜಕೀಯ ಕ್ಷೇತ್ರದಲ್ಲಿ ಹೆಜ್ಜೆ ಹಾಕದಿದ್ದರೆ ಈ ದೇಶಕ್ಕೆ ಉಳಿಗಾಲವಿಲ್ಲ ಎಂಬ ಖಚಿತ ಅಭಿಪ್ರಾಯವನ್ನು ಡಾ. ವಿಕಾಸ ಮಹಾತ್ಮೆ ಹೊಂದಿದ್ದಾರೆ.

1992ರಲ್ಲಿ ಡಾ. ವಿಕಾಸ್ ಮಹಾತ್ಮೆ ಅವರು ಸ್ತ್ರೀರೋಗತಜ್ಞರಾದ ಡಾ. ಸುನೀತಾ ಅವರನ್ನು ಮದುವೆಯಾಗುತ್ತಾರೆ. ಈ ದಂಪತಿಗಳಿಗೆ ಏಕೈಕ ಮಗ ಡಾ. ಚಿನ್ಮಯ. ಕೊಯಮುತ್ತೂರಿನ ಅರವಿಂದ ನೇತ್ರ ಆಸ್ಪತ್ರೆಯಲ್ಲಿ ಅಧ್ಯಯನ ಮಾಡಿರುವ ಡಾ.ಚಿನ್ಮಯ ಪ್ರಸಿದ್ಧ ನೇತ್ರ ಶಸ್ತ್ರಚಿಕಿತ್ಸಾ ತಜ್ಞರು. ತುಂಬಾ ಪ್ರತಿಭಾವಂತ ಹಾಗೂ ಉತ್ಸಾಹಿಶೀಲ ಯುವ ವೈದ್ಯರೆಂದು ಅವರು ಗುರುತಿಸಲ್ಪಟ್ಟಿದ್ದಾರೆ.

ಡಾ. ವಿಕಾಸ ಮಹಾತ್ಮೆ ಆದರ್ಶ ವೈದ್ಯರಾಗಿ, ಸಮಾಜಮುಖಿ ಚಿಂತಕರಾಗಿ, ಸಮಾಜದ ಅನೇಕ ಸಮಸ್ಯೆಗಳಗಳನ್ನು ಪರಿಹಾರ ಮಾಡುವ ಸುಧಾರಕರಾಗಿ ನಮ್ಮೊಡನೆ ಇದ್ದಾರೆ. ಅವರ ಬಹುವಿಧವಾದ ಸೇವೆಯನ್ನು ಪರಿಗಣಿಸಿ 2010ರಲ್ಲಿ ಭಾರತ ಸರ್ಕಾರ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಆದರ್ಶದ ಬದುಕು ಮತ್ತು ಕಾಯಕನಿಷ್ಠೆ ಹೊಂದಿರುವ ಡಾ. ವಿಕಾಸ ಮಹಾತ್ಮೆ ಅವರಿಂದ ಮನುಕುಲಕ್ಕೆ ದೀರ್ಘಕಾಲ ಸೇವೆ ದೊರೆಯಲೆಂದು ಆಶಿಸುತ್ತೇನೆ.

▪ ನಿರೂಪಣೆ: ಶ್ರೀವತ್ಸ



■ ಪ್ರೊ. ನರೇಂದ್ರ ವಿಶ್ವನಾಥ್
ಪ್ರಾಂಶುಪಾಲರು
ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು

# ಸೆಮಿಕಂಡಕ್ಟರ್

## ಡಿಜಿಟಲ್ ಆರ್ಥಿಕತೆಯ ದೈತ್ಯಶಕ್ತಿ



ಸೆಪ್ಟೆಂಬರ್ 2 ರಿಂದ 4ರವರೆಗೆ ದೆಹಲಿಯಲ್ಲಿ ಜಗತ್ತಿನ ಸೆಮಿಕಂಡಕ್ಟರ್ ಕ್ಷೇತ್ರಕ್ಕೆ ಸೇರಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸೆಮಿಕಾನ್ ಇಂಡಿಯಾ–2025 ಸಭೆ ನಡೆಯಿತು. ಮುಂದಿನ ಹತ್ತು ವರ್ಷಗಳಲ್ಲಿ ಭಾರತವನ್ನು ಜಗತ್ತಿನ ಸೆಮಿಕಂಡಕ್ಟರಿನ ರಾಜಧಾನಿಯನ್ನಾಗಿ ಮಾಡಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುವುದು. ಜಗತ್ತಿನಾದ್ಯಂತ ಚಾಲಕಶಕ್ತಿಯಾಗಿರುವ ಪೆಟ್ರೋಲ್ ಬ್ಲಾಕ್ ಗೋಲ್ಡ್ ಆಗಿದ್ದರೆ, ಸೆಮಿಕಂಡಕ್ಟರನ್ನು ಡಿಜಿಟಲ್ ಡೈಮಂಡ್ ಐಎಸ್ಎಂ–2 ಎಂದು ಪರಿಗಣಿಸುತ್ತಾರೆ. ಇಂಡಿಯಾ ಸೆಮಿಕಂಡಕ್ಟರ್ ಮಿಷನ್–2. ಯೋಜನೆಗೆ 1.76 ಲಕ್ಷ ಕೋಟಿ ರೂಪಾಯಿ ಬಂಡವಾಳ ತೊಡಗಿಸಿ, ಚಿಪ್‌ಗಳ ತಯಾರಿಕೆ, ಹೈಟೆಕ್ ಡಿಸೈನ್, ಪ್ಯಾಕೇಜಿಂಗ್ ಮಾಡಲು ಬೇಕಾದ ಪರಿಸರ ಮತ್ತು ಪೂರಕ ವಾತವರಣ ರೂಪಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಸ್ಪಷ್ಟ ಮಾತುಗಳಲ್ಲಿ ಹೇಳಿದರು.

ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್, 'ಡಿಜಿಟಲ್ ಆರ್ಥಿಕತೆ ವೇಗವಾಗಿ ಬೆಳೆಯುತ್ತಿದ್ದು ಅದಕ್ಕೆ ಸೆಮಿಕಂಡಕ್ಟರ್ ಉದ್ಯಮ ಶರವೇಗದ ಚಾಲನೆಯನ್ನು ಕೊಡಲಿದೆ' ಎಂದಿದ್ದಾರೆ.


ಸೆಮಿಕಾನ್ ಸಮಾವೇಶದ ಅನಂತರ ದೇಶದಲ್ಲಿ ಚರ್ಚೆಗಳು, ವಿಚಾರ ಸಂಕಿರಣಗಳು, ಮತ್ತು ಜಾಗೃತಿ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸೆಮಿಕಂಡಕ್ಟರ್ ವಲಯದಲ್ಲಿ ಭಾರತಕ್ಕೆ ಯಾವ ರೀತಿಯ ಭವಿಷ್ಯವಿದೆ, ಯಾವ ರೀತಿ ಸಜ್ಜಾಗುತ್ತಿದೆ, ಭವಿಷ್ಯದ ಸವಾಲುಗಳೇನು, ಸರ್ಕಾರದ ಪ್ರಯತ್ನದ ಆಚೆಗೂ ಏನೇನು ಕೆಲಸಗಳು ಆಗಬೇಕಿದೆ, ಈ ವಲಯದಲ್ಲಿ ಸಾಧನೆ ಮಾಡಿರುವ ದೇಶಗಳಿಂದ ನಾವು ಕಲಿಯಬೇಕಾದುದು ಯಾವುದು ಎಂಬುದರ ಬಗ್ಗೆ ಚಿಂತನೆ ಮಾಡಬೇಕಾದ ಅಗತ್ಯವಿದೆ.

ಐ.ಎಸ್.ಎಮ್. ಇಂಡಿಯಾ ಸೆಮಿಕಂಡಕ್ಟರ್ ಮಿಷನ್–ಒನ್ (ISM INDIA MISSSION-1) ಯೋಜನೆಯಲ್ಲಿ ಹತ್ತು ಬಿಲಿಯನ್ ಡಾಲರ್ ಹಣ ಬಂಡವಾಳ ಹೂಡಿಕೆಯಾಗಿದ್ದರೆ, ಈಗ ಐಎಸ್ಎಂ.2.0 (ISM INDIA MISSSION-2) ಯೋಜನೆ ಪ್ರಸ್ತಾವನೆ ಕೇಂದ್ರ ಸಚಿವ ಸಂಪುಟದ ಮುಂದೆ ಬರುತ್ತಿದೆ. ನೀರೀಕ್ಷೆಯಂತೆ ಸಾಗಿದರೆ ಮುಂದಿನ ಒಂದೆರಡು ತಿಂಗಳಲ್ಲಿ ಅನುಮೋದನೆ ದೊರಕುವ ನಿರೀಕ್ಷೆಯಿದೆ. ಗಮನಿಸಬೇಕಾದ ಸಂಗತಿ ಎಂದರೆ ಕೇಂದ್ರ ಸರ್ಕಾರ ನಿಗದಿಪಡಿಸುತ್ತಿರುವ, ಉದ್ಯಮಕ್ಕೆ ಅಗತ್ಯವಿರುವ ಬಂಡವಾಳ 20 ಬಿಲಿಯನ್ ಡಾಲರ್ ಈ ಯೋಜನೆಗೆ ಅನುಮೋದನೆ ದೊರಕಿ ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಭಾರತವು ಈ ನಿಟ್ಟಿನಲ್ಲಿ ಕೆಲವೇ ವರ್ಷಗಳಲ್ಲಿ ಅಗ್ರಗಣ್ಯ ರಾಷ್ಟ್ರವಾಗಲಿದೆ. ಹಾಗಾದಾಗ ಭಾರತದಲ್ಲಿ ಕೊರಿಯ, ತೈವಾನ್, ಚೈನಾ, ಅಮೆರಿಕಾ ದೇಶಗಳು ಸೆಮಿಕಂಡಕ್ಟರ್ ವಲಯದಲ್ಲಿ ಯಾವ ಪ್ರಗತಿಯನ್ನು ಸಾಧಿಸಿವೆಯೋ ಅದಕ್ಕಿಂತಲೂ ಮಿಗಿಲಾದ ಸಾಧನೆ ಆಗಲಿದೆ. ಅಂತಹ ಪ್ರಮುಖ ದೇಶಗಳು ನಮ್ಮಲ್ಲಿ ಬಂಡವಾಳ ಹೂಡಿ, ಉದ್ಯಮ ಸ್ಥಾಪಿಸಲು ಹೆಚ್ಚು ಆಸಕ್ತಿ ತೋರಿಸುತ್ತಿವೆ. ಭಾರತದ ಭವಿಷ್ಯದ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ ಬೆಳವಣಿಗೆ. ಇದು ಡಿಜಿಟಲ್ ಆರ್ಥಿಕತೆಯು ಉತ್ತುಂಗಕ್ಕೆ ಏರುವುದಕ್ಕೆ ಭದ್ರ ಅಡಿಪಾಯವಾಗಲಿದೆ. ಇದರಿಂದ ಸೆಮಿಕಂಡಕ್ಟರ್ ಉದ್ಯಮಕ್ಕೆ ಹೊಸ ಚೈತನ್ಯ ಬರಲಿದೆ. ಭಾರತವು ಕೇವಲ ಚಿಪ್‌ಗಳನ್ನು ವಿನ್ಯಾಸ ಮಾಡುವುದರ ಜೊತೆಗೆ ಇಲ್ಲಿಯೇ ಚಿಪ್‌ಗಳನ್ನು ತಯಾರು ಮಾಡುವಂತಹ ತಾಂತ್ರಿಕ ಕೌಶಲವನ್ನು ಗಳಿಸಲಿದೆ. ಮೈಕ್ರಾನ್ ಎಂಬ ಕಂಪನಿ ತನ್ನ ಅಸೆಂಬ್ಲಿ ಟೆಸ್ಟಿಂಗ್ ಮತ್ತು ಪ್ಯಾಕೇಜನ್ನು ಗುಜರಾತಿನಲ್ಲಿ ಮಾಡಲು ತಯಾರಿ ನಡೆಸಿದೆ. ಮುಂದಿನ 10 ವರ್ಷಗಳಲ್ಲಿ ಅಗತ್ಯವಿರುವ 10 ಲಕ್ಷ ಸೆಮಿಕಂಡಕ್ಟರ್ ಇಂಜಿನಿಯರ್‌ಗಳ ನಿರೀಕ್ಷೆಯಿದ್ದು ಭಾರತವು ಅದರಲ್ಲಿ ಶೇಕಡ 50 ಭಾಗ ಅಂದರೆ ಐದು ಲಕ್ಷ ಸೆಮಿಕಂಡಕ್ಟರ್ ಇಂಜಿನಿಯರ್‌ಗಳನ್ನು ತಯಾರು ಮಾಡಲಿದೆ. ನಮ್ಮಲ್ಲಿ ಈಗಾಗಲೇ ಪ್ರಬಲ ಟ್ರೈನಿಂಗ್ ಸೆಂಟರ್‌ಗಳು ಕಾರ್ಯರೂಪಕ್ಕೆ ಬಂದಿವೆ. ಬೆಂಗಳೂರು ಹೈದರಾಬಾದ್, ನೊಯಿಡಾಗಳಲ್ಲಿ ಐಟಿ ಸಂಶೋಧನಾ ಕೇಂದ್ರಗಳು ಕಾರ್ಯಾರಂಭ ಮಾಡುತ್ತಿವೆ. ಕೃತಕ ಬುದ್ಧಿಮತ್ತೆ (ಎಐ), ರೋಬೋಟ್ ಮತ್ತು ಮೆಷಿನ್ ಲರ್ನಿಂಗ್ ಇದಕ್ಕೆಲ್ಲ ಎಲೆಕ್ಟ್ರಾನಿಕ್ ಡಿವೈಸ್ ಬಹಳ ಮುಖ್ಯವಾಗಿದೆ. ಎಲ್ಲ ಎಲೆಕ್ಟ್ರಾನಿಕ್ ವಸ್ತುಗಳ ಕಾರ್ಯ ಚಟುವಟಿಕೆಗಳಿಗೆ ಸೆಮಿಕಂಡಕ್ಟರ್ ಚಿಪ್ ಪ್ರಮುಖ ಜೀವಾಳ. "ಆಡು ಮುಟ್ಟದ ಸೊಪ್ಪಿಲ್ಲವೆಂಬಂತೆ ಸೆಮಿಕಂಡಕ್ಟರ್ ಇಲ್ಲದ ಕ್ಷೇತ್ರವೇ ಇಲ್ಲ" ಎನ್ನುಬಹುದು. ಇದರಿಂದಾಗಿ ಮುಂದಿನ ಕೆಲ ವರ್ಷಗಳಲ್ಲಿ ಇಂಜಿನಿಯರಿಂಗ್ ಶಿಕ್ಷಣದ ಪಠ್ಯಕ್ರಮದಲ್ಲೂ ಬದಲಾವಣೆಗಳು ಆಗಲಿವೆ. ಈಗಾಗಲೇ ಇದಕ್ಕಾಗಿ ಪ್ರಯತ್ನಗಳು ನಡೆಯುತ್ತಿವೆ. ವಿ.ಎಲ್.ಎಸ್.ಐ.ನಿಂದ (VLSI) ಕೇವಲ ವಿನ್ಯಾಸ ಮಾತ್ರವಲ್ಲದೆ ಚಿಪ್ಪುಗಳನ್ನು ದೇಶದಲ್ಲಿ ತಯಾರುಮಾಡುವ ಸಾಮರ್ಥ್ಯವೂ ದೊರಕಲಿದೆ. ಇದರಿಂದ ನ್ಯಾನೋ ತಂತ್ರಜ್ಞಾನ ಬಹಳ ಉತ್ತಮ ಮಟ್ಟಕ್ಕೆ ಹೋಗುತ್ತದೆ. ಇಂದು ನಾವು ಮೈಕ್ರಾನ್‌ನಿಂದ ನ್ಯಾನೋ ಫ್ಯಾಬ್ರಿಕೇಷನ್‌ಗೆ ಬಂದಿದ್ದೇವೆ. ಸಿಲಿಕಾನ್ ಎಂದರೆ ಮಣ್ಣು ಮತ್ತು ಮರಳಿನಲ್ಲಿ ದೊರೆಯುವ ರಾಸಾಯನಿಕ ವಸ್ತು. ಈ ವಿಷಯದಲ್ಲಿ ಹೊರದೇಶಗಳೊಂದಿಗೆ ಕೊಲಾಬೊರೇಷನ್ ಉತ್ತಮವಾಗಿ ನಡೆಯುತ್ತಿದೆ. ಜಪಾನ್ ತೈವಾನ್, ಮತ್ತು ಕೊರಿಯಾ ದೇಶಗಳೊಂದಿಗೆ ಸೆಮಿಕಂಡಕ್ಟರ್ ಚಿಪ್ ತಯಾರಿಕೆ ಕುರಿತಂತೆ ಹಲವು ತಿಳುವಳಿಕೆ ಒಪ್ಪಂದ (ಎಂಒಯು) ಮಾಡಿಕೊಳ್ಳಲಾಗುತ್ತಿದೆ. ಈ ದೇಶಗಳು ಸೆಮಿಕಂಡಕ್ಟರ್ ವಲಯದಲ್ಲಿ ನಮಗಿಂತ ಬಹಳ ಮುಂದಿವೆ. ಮಹತ್ತ್ವದ ಸಂಗತಿ ಎಂದರೆ ಆ ದೇಶಗಳು ನಮ್ಮ ದೇಶದ ಸೆಮಿಕಂಡಕ್ಟರ್ ಟೆಕ್ನಾಲಜಿಯನ್ನು ಗುರುತಿಸಿ, ಮಾನ್ಯಮಾಡಿವೆ. ಈ ವಲಯದಲ್ಲಿ ಭಾರತ ಈ ವರೆಗೆ ನಿರೀಕ್ಷಿತ ಮಟ್ಟದ ಸಾಧನೆ ಮಾಡದಿರುವುದಕ್ಕೆ ಪ್ರಮುಖವಾಗಿ ಬಂಡವಾಳದ ಕೊರತೆ ಕಾರಣವಾಗಿತ್ತು. ಎರಡನೆಯದಾಗಿ ಚಿಪ್ಪುಗಳನ್ನು ನಾವೇ ವಿನ್ಯಾಸ ಮಾಡುತ್ತಿದ್ದರೂ ಅವುಗಳನ್ನು ತಯಾರು ಮಾಡಲು ಬೇರೆ ದೇಶವನ್ನು ಅವಲಂಬಿಸಬೇಕಿತ್ತು. ಇದಕ್ಕೆ ಇಷ್ಟೊಂದು ಮಹತ್ವವು ಇರುವ ಕಾರಣ ಜಗತ್ತಿನಲ್ಲಿ ಸೆಮಿಕಂಡಕ್ಟರ್ ಚಿಪ್ ಇಲ್ಲದೇ ಯಾವ ಕೆಲಸವೂ ನಡೆಯುವುದಿಲ್ಲ. ಚಿಪ್‌ಗಳ ತಯಾರಿಕೆಗೆ ಅಗತ್ಯವಾದ ತೆಳುವಾದ, ವೃತ್ತಾಕಾರದ ಅತಿ ಶುದ್ಧವಾದ ಸಿಲಿಕಾನ್‌ನ ಅಗತ್ಯವಿರುತ್ತದೆ. ಇದನ್ನು ಸಿಲಿಕಾನ್ ವೇಫರ್ಸ್ ಎಂದು ಕರೆಯುತ್ತಾರೆ. ಇದರಲ್ಲಿ ಸೆಮಿಕಂಡಕ್ಟರ್ ಡಿಸೈನ್ ಮಾಡುತ್ತೇವೆ. ಈ ಚಿಪ್ಪಿನಲ್ಲಿ ಕೋಟ್ಯಂತರ ಸಿಸ್ಟಮ್ ಇರಲಿದೆ. ಸೆಮಿಕಾನ್ ಸಮಾವೇಶದಲ್ಲಿ ವಿಕ್ರಮ್–32 ಸೆಮಿಕಾನ್ ಚಿಪ್ಪನ್ನು ಪ್ರಧಾನ ಮಂತ್ರಿಗಳಿಗೆ ನೀಡಲಾಯಿತು. ಇಸ್ರೋ ಸ್ಪೇಸ್ ಚಟುವಟಿಕೆಗಳಿಗಾಗಿ ಇದನ್ನು ವಿಕ್ರಂ ಹೆಸರಿನಲ್ಲಿ ತಯಾರಿಸಿದೆ. ಈಗ ದೇಶದಲ್ಲಿ ಸಂಪರ್ಕ ಕ್ರಾಂತಿಯಾಗಿದೆ. 2ಜಿ, 3ಜಿ, ಕೊನೆಗೆ 5ಜಿ ಎಲ್ಲಾ ಮುಗಿದು ಈಗ ನಾವು 6ಜಿಗೆ ಕಾಲಿಡುತ್ತಿದ್ದೇವೆ. ಇದಕ್ಕೆ ಅಗತ್ಯವಾದ ತಂತ್ರಜ್ಞಾನವನ್ನು ನಾವೇ ರೂಪಿಸಿಕೊಳ್ಳಬೇಕಾಗಿದೆ. ಇದಕ್ಕೆ ಹೈ ಎಂಡ್ ಟ್ರಾನ್ಸಿಸ್ಟರ್‌ಗಳು ಬೇಕಾಗುತ್ತದೆ. ಸ್ಯಾಟಲೈಟ್ ಸಂಪರ್ಕ ಎಲಾನ್ ಮಸ್ಕ್ ಅವರ ಸ್ಟಾರ್ ಲಿಂಕ್ ಕಂಪನಿ ಜೊತೆ ಒಡಂಬಡಿಕೆಯಾದರೆ ಇದರಿಂದ ಮೊಬೈಲ್ ಡೇಟಾಕ್ಕಾಗಿ ಜನತೆ ಖರ್ಚು ಮಾಡುತ್ತಿರುವ ಹಣದಲ್ಲಿ ಕನಿಷ್ಠ ಎಂದರೂ ಶೇಕಡ 25 ಭಾಗದಷ್ಟು ಉಳಿತಾಯವಾಗಿ ಸಂಪರ್ಕ ವ್ಯವಸ್ಥೆಗೆ ಶರವೇಗದ ಚಾಲನೆ ದೊರಯಲಿದೆ. ಆರ್ಥಿಕ ಚಟುವಟಿಕೆ ನಿರೀಕ್ಷೆ ಮೀರಿ ಬೆಳವಣಿಗೆಗಳನ್ನು ಕಾಣಲಿದೆ. ಈಗಿನ ಡೇಟಾ ಟ್ರಾನ್ಸ್‌ಫರ್‌ಗಿಂತ ನೂರುಪಟ್ಟು ಡೇಟಾಗಳನ್ನು ಬಹಳ ವೇಗವಾಗಿ ವರ್ಗಾಯಿಸಬಹುದು. ಮುಂದಿನ 5–6 ವರ್ಷಗಳಲ್ಲಿ ಕ್ವಾಂಟಮ್ ಕಂಪ್ಯೂಟಿಂಗ್ ಬರಲಿದೆ. ಇದು ಇಂದು ನಾವು ಬಳಕೆ ಮಾಡುತ್ತಿರುವ ಕಂಪ್ಯೂಟರ್ ವೇಗಕ್ಕಿಂತ ಲಕ್ಷಾಂತರ ಪಟ್ಟು ವೇಗವಾಗಿ ಕೆಲಸ ಮಾಡಲಿದೆ. ಈಗಾಗಲೇ IT, VLSI ಮತ್ತು ಚಿಪ್ ಡಿಸೈನ್ನಲ್ಲಿ ನಮ್ಮ ದೇಶ ಪ್ರಬಲ ಕೇಂದ್ರವಾಗಿದೆ. ಸರ್ಕಾರದ ಆರ್ಥಿಕ ಪ್ರೋತ್ಸಾಹ ಉತ್ತಮ ಹೆಜ್ಜೆ. ಆದರೆ ಇದಷ್ಟೆ ಸಾಕಾಗುವುದಿಲ್ಲ. ಉನ್ನತ ಮಟ್ಟದ ಫ್ಯಾಬ್ರಿಕೇಷನ್ ಯುನಿಟ್‌ಗಳಿಗೆ ಜಾಗತಿಕ ತಂತ್ರಜ್ಞಾನದ ಸಹಭಾಗಿತ್ವವೂ ಬೇಕು. ವೇಗದ ಅನುಮೋದನಾ ಪ್ರಕ್ರಿಯೆ (Single Window Clearance). ಮೂಲಸೌಕರ್ಯ (ನೀರಿನ ಲಭ್ಯತೆ, ವಿದ್ಯುತ್, ಕ್ಲೀನ್ ರೂಮ್ ಸೌಲಭ್ಯ). ಕೌಶಲಾಭಿವೃದ್ಧಿ ಕೇಂದ್ರಗಳ ಬಲವರ್ಧನೆಯಾಗಬೇಕು.

**ಶೈಕ್ಷಣಿಕ ವ್ಯವಸ್ಥೆ ಮೇಲೆ ಪರಿಣಾಮ:**

ಪ್ರಸ್ತುತ ಪಠ್ಯಕ್ರಮ ಹಳೆಯ ಮಾದರಿಯದ್ದಾಗಿದೆ. ಇದರಿಂದ ಕೈಗಾರಿಕೆಗಳಿಗೆ ಬೇಕಾದ ಕುಶಲ ಮಾನವ ಸಂಪನ್ಮೂಲ (practically skilled manpower) ತಯಾರಾಗುತ್ತಿಲ್ಲ. ಇದನ್ನು ಬದಲಾಯಿಸಿ VLSI, ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್, ಪ್ಯಾಕೇಜಿಂಗ್ ವಿಷಯಗಳನ್ನು ಪದವಿ ಮಟ್ಟದಿಂದಲೇ ಸೇರಿಸಬೇಕು.

▶▶ 6ನೇ ಪುಟಕ್ಕೆ...



## ವರ್ಷಕ್ಕೆ 24 ಬಿಲಿಯನ್ ಚಿಪ್ ತಯಾರಿಕೆ!

ಸರ್ಕಾರ ಇಲ್ಲಿಯವರೆಗೆ ಅನುಮೋದಿಸಿರುವ ಯೋಜನೆಗಳಿಂದ ವರ್ಷಕ್ಕೆ 24 ಬಿಲಿಯನ್ ಚಿಪ್‌ಗಳನ್ನು ಉತ್ಪಾದಿಸಲಾಗುತ್ತದೆ. ಸಿಲಿಕಾನ್ ಸಿಟಿ ಎಂದು ಹೆಸರು ಪಡೆದಿರುವ ಬೆಂಗಳೂರಿನಲ್ಲಿ ಈಗಾಗಲೇ 200ಕ್ಕೂ ಹೆಚ್ಚು ಸೆಮಿಕಂಡಕ್ಟರ್ ವಿನ್ಯಾಸ ಕಂಪನಿಗಳು ಕಾರ್ಯ ನಿರ್ವಹಿಸುತ್ತಿದ್ದು, ಭವಿಷ್ಯದಲ್ಲಿ ಬೆಂಗಳೂರು ಸೆಮಿಕಂಡಕ್ಟರ್‌ನ ಜಾಗತಿಕ ನಕ್ಷೆಯಲ್ಲಿ ಪ್ರಮುಖ ಸ್ಥಾನ ಪಡೆಯುವ ಎಲ್ಲ ಲಕ್ಷಣಗಳನ್ನೂ ಹೊಂದಿದೆ. ಕಾರಣ ಜಗತ್ತಿನ ಪ್ರಮುಖ ಕಂಪನಿಗಳ ಆರ್.ಅಂಡ್.ಡಿ ಕೇಂದ್ರಗಳು ಇರುವುದೇ ಬೆಂಗಳೂರಿನಲ್ಲಿ. ಭಾರತದಲ್ಲಿ ತಯಾರಾಗುವ ಚಿಕ್ಕ ಚಿಪ್‌ಗಳು ವಿಶ್ವದ ಅತಿದೊಡ್ಡ ಬದಲಾವಣೆಗೆ ಕಾರಣವಾಗುವ ದಿನ ಬಹು ದೂರವಿಲ್ಲ. ಐಎಸ್ಎಂ–2 ಯೋಜನೆಯಲ್ಲಿ ಸರ್ಕಾರ 1.76 ಲಕ್ಷ ಕೋಟಿ ರೂಪಾಯಿ ಬಂಡವಾಳ ತೊಡಗಿಸಲು ಮುಂದಾಗಿರುವುದೇ ಈ ವಲಯದ ಪ್ರಾಮುಖ್ಯಕ್ಕೆ ಹಿಡಿದ ಕನ್ನಡಿ. ನಮಗಿಂತ ಹತ್ತು ಪಟ್ಟು ಹೆಚ್ಚು ಮುಂದುವರಿದ, ಸಾಧನೆ ಮಾಡಿದ ದೇಶಗಳು ನಮ್ಮ ವಿನ್ಯಾಸ–ತಂತ್ರಜ್ಞಾನವನ್ನು ಗುರುತಿಸಿ ಮಾನ್ಯ ಮಾಡಿರುವುದು ಭಾರತದ ವಿಶ್ವಾಸವನ್ನು ಇಮ್ಮಡಿಗೊಳಿಸಿದೆ. ಒಂದು ಚಿಪ್ಪಿನಲ್ಲಿ ಕೋಟ್ಯಂತರ ಟ್ರಾನ್ಸಿಸ್ಟರ್‌ಗಳಿದ್ದು, ಅವು ಎಲೆಕ್ಟ್ರಾನ್ ಹರಿವನ್ನು ನಿಯಂತ್ರಿಸಿ "ಮೆಮೊರಿ, ಲಾಜಿಕ್, ಪ್ರೊಸೆಸಿಂಗ್" ಮೊದಲಾದ ಕಾರ್ಯಗಳನ್ನು ನಿರ್ವಹಿಸಲಿವೆ. ಉತ್ಪಾದನೆಯಲ್ಲಿ ಅಗ್ರಸ್ಥಾನ ಪಡೆದಿರುವ ಮೊದಲ ವಿಶ್ವದ ಐದು ದೇಶಗಳೆಂದರೆ ತೈವಾನ್, ದಕ್ಷಿಣ ಕೊರಿಯಾ, ಜಪಾನ್. ಅಮೆರಿಕ ಮತ್ತು ಚೈನಾ.

## ನಮ್ಮ ದಿವ್ಯಮಂತ್ರ



ಸುಧಾರಣೆ, ಬದಲಾವಣೆ ಮತ್ತು ಕಾರ್ಯ ಅನುಷ್ಠಾನ ಇವು ನಮ್ಮ ದಿವ್ಯಮಂತ್ರ. ಅದನ್ನು ನಂಬಿ ನಾವು ಇಲ್ಲಿಯವರೆಗೂ ಬಂದಿದ್ದೇವೆ. ದೇಶದ ಉಜ್ವಲ ಭವಿಷ್ಯಕ್ಕಾಗಿ ಈ ಸಂಶೋಧನೆ, ಸುಧಾರಣೆಗಳನ್ನು ಮುಂದಕ್ಕೆ ತೆಗೆದುಕೊಂಡು ಹೋಗುವ ಮತ್ತು ಅದರ ಫಲ ದೇಶ ಮತ್ತು ಜನತೆಗೆ ತಲುಪಿಸುವ ಸಂಕಲ್ಪ ಮಾಡಿದ್ದೇವೆ. ಜಗತ್ತಿನಾದ್ಯಂತ ಚಾಲಕಶಕ್ತಿಯಾಗಿರುವ ಪೆಟ್ರೋಲ್ ಬ್ಲಾಕ್ ಗೋಲ್ಡ್ ಆಗಿದ್ದರೆ, ಸೆಮಿಕಂಡಕ್ಟರ್ ಡಿಜಿಟಲ್ ಡೈಮಂಡ್. ನಮ್ಮ ಆಡಳಿತ ನೀತಿ, ಕಾರ್ಯ ಯೋಜನೆಗಳು ಅಲ್ಪ ಕಾಲೀನದವುಗಳಲ್ಲ ಬದಲಾಗಿ ಅವು ನಮ್ಮ ದೀರ್ಘಕಾಲದ ಬದ್ಧತೆಯ ಪ್ರತೀಕ.

ಪ್ರಧಾನಿ ನರೇಂದ್ರ ಮೋದಿ

(ಸೆಮಿಕಾನ್ ಇಂಡಿಯಾ –2025 ಸಮಾವೇಶದಲ್ಲಿ ಆಡಿದ ಮಾತು)

# ಕನ್ನಡನಾಡಿನಲ್ಲಿ ಹುಟ್ಟುವುದಕ್ಕೆ ಪ್ರತಿಯೊಬ್ಬರು ತಪಸ್ಸು ಮಾಡಿರಬೇಕು

"ಕನ್ನಡ ಕೇವಲ ಭಾಷೆಯಲ್ಲ, ಅದು ಸಂಪತ್ತಿನ ಧಾತು, ಭಾರತದಲ್ಲಿ ಹುಟ್ಟಿರುವುದಕ್ಕೆ ಪುಣ್ಯ ಮಾಡಿರಬೇಕು, ಅದರಲ್ಲಿಯೂ ಕರ್ನಾಟಕದಲ್ಲಿ ಹುಟ್ಟಿರುವುದಕ್ಕೆ ತಪಸ್ಸು ಮಾಡಿರಬೇಕು. ಈ ನೆಲದಲ್ಲಿ ಹುಟ್ಟಿರುವ ನಾವು, ನೀವು ಅದೃಷ್ಟ ಪಡೆದಿದ್ದೇವೆ. ನಮ್ಮ ಸಾಂಸ್ಕೃತಿಕ ಸಂಪತ್ತನ್ನು ಉಳಿಸಿ, ಬೆಳೆಸಿ ಪೋಷಿಸುವ ಮತ್ತು ಉನ್ನತೀಕರಿಸುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ" ಎಂದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ಜಾನಪದ ವಿದ್ವಾಂಸರಾದ ಇಲಕಲ್ಲಿನ ಡಾ. ಶಂಭು ಬಳಿಗಾರ್ ಅವರು ಅಭಿಪ್ರಾಯ ಪಟ್ಟರು.

ತುಮಕೂರು ನಗರದ ಶಿರಾರಸ್ತೆಯ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 70ನೆಯ ಕನ್ನಡ ರಾಜ್ಯೋತ್ಸವವನ್ನು ನ. 5 ರಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶಾಂತರಾಜು ಅವರು "ಕನ್ನಡ ಭಾಷೆಯನ್ನು ಉಳಿಸಲು ಮತ್ತು ಬೆಳೆಸಲು ಪ್ರತಿಯೊಬ್ಬರು ಶ್ರಮಿಸಬೇಕು" ಎಂದರು. ಇದೇ ಸಂದರ್ಭದಲ್ಲಿ ತುಮಕೂರು ಜಿಲ್ಲೆಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಗಂಗಾಧರ ಎನ್. ಕೊಡ್ಲಿ ಅವರು ಮಾತನಾಡುತ್ತಾ "ಭಾಷೆಯೆಂದರೆ ವಿಚಾರ ವಿನಿಮಯ ಮಾಡುವ ಸಂವಹನ ಸಾಧನ. ಭಾಷೆ ಎಂಬುದು ಮನದಾಳದ ಮಾತು. ಮನಸ್ಸಿನ ಪ್ರತಿಬಿಂಬವೇ ಭಾಷೆ. ನಮ್ಮ ರಾಜ್ಯದ ಸಾಹಿತ್ಯ ಸಂಬಂಧದ ಅಭಿವ್ಯಕ್ತಿ ಮಾಧ್ಯಮ ಕನ್ನಡ ಭಾಷೆ. ಸಾಹಿತ್ಯದಲ್ಲಿ ಕನ್ನಡಿಗರ ಚಿಂತನೆ ಪರಸ್ಪರ ಪ್ರತಿಬಿಂಬವಾಗಬೇಕು. ಸಾವಿರಾರು ವರ್ಷಗಳ ಇತಿಹಾಸವುಳ್ಳ ಕನ್ನಡ ಭಾಷೆ ತಾಂತ್ರಿಕ ಕ್ಷೇತ್ರದಲ್ಲೂ ಬಳಕೆಯಾಗಬೇಕು. ಯುವಪೀಳಿಗೆಯಲ್ಲಿ ಕನ್ನಡ ಉಳಿಯಲಿ, ಕನ್ನಡ ಬೆಳೆಯಲಿ. ಕನ್ನಡ ಭಾಷೆಯ ಮಹತ್ತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು ಮುಖ್ಯ" ಎಂದರು.




**ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಶಂಭು ಬಳಿಗಾರ್ ಮತ್ತು ಶಾಂತರಾಜು, ತುಮಕೂರು ಜಿಲ್ಲೆಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಗಂಗಾಧರ ಎನ್. ಕೊಡ್ಲಿ, ಡಾ. ಎಂ.ಆರ್. ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಅಂಬಿಕಾ ಎಂ. ಹುಲಿನಾಯ್ಕರ್, ಉಪಪ್ರಾಂಶುಪಾಲರಾದ ಡಾ. ಎನ್. ಚಂದ್ರಶೇಖರ್, ಕಾರ್ಯಕ್ರಮದ ಸಂಯೋಜಕರಾದ ಎಂ.ಎಸ್. ಚೇತನ್ ಮತ್ತು ಪ್ರಜಾಪ್ರಗತಿಯ ಸಹ ಸಂಪಾದಕರಾದ ಟಿ.ಎನ್. ಮಧುಕರ್.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು "ಕನ್ನಡ ರಾಜ್ಯೋತ್ಸವದ ಈ ಶುಭ ಸಂದರ್ಭದಲ್ಲಿ ಎಲ್ಲರಿಗೂ ಹಾರ್ದಿಕ ಶುಭಾಶಯಗಳು. ಕನ್ನಡ ಭಾಷೆಯಲ್ಲಿ ಮಾತನಾಡುವುದು, ಬಳಕೆ ಮಾಡುವುದು ಮತ್ತು ಕನ್ನಡಿಗರಿಗೆ ಉದ್ಯೋಗ ಕಲ್ಪಿಸುವುದು ಇಂದಿನ ಅಗತ್ಯವಾಗಿದೆ. ಕನ್ನಡ ರಾಜ್ಯೋತ್ಸವ ಆಚರಣೆ ಒಂದು ದಿನಕ್ಕೆ ಸೀಮಿತವಾಗದೆ ಪ್ರತಿದಿನದ ಆಚರಣೆ ದಿನವಾಗಬೇಕು. ಎಲ್ಲಾ ಕ್ಷೇತ್ರಗಳಲ್ಲಿ ಮತ್ತು ಎಲ್ಲಾ ತರಹದ ಕಾರ್ಯಕ್ರಮಗಳಲ್ಲಿ ಕನ್ನಡ ಭಾಷೆಗೆ ಆದ್ಯತೆ ಕೊಡುವ ಬಗೆಗೆ ಪ್ರತಿಯೊಬ್ಬರು ಚಿಂತಿಸಬೇಕು. ಕನ್ನಡ ಭಾಷೆಯ ಅಭಿವೃದ್ಧಿಯ ಬಗ್ಗೆ ನಾವೆಲ್ಲರೂ ಶ್ರಮಿಸೋಣ" ಎಂದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ಜಾನಪದ ವಿದ್ವಾಂಸರಾದ ಡಾ. ಶಂಭು ಬಳಿಗಾರ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶಾಂತರಾಜು, ತುಮಕೂರು ಜಿಲ್ಲೆಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಗಂಗಾಧರ ಎನ್. ಕೊಡ್ಲಿ ಅವರನ್ನು ಸನ್ಮಾನಿಸಲಾಯಿತು. ಜೊತೆಗೆ ಸಂಸ್ಥೆಯಲ್ಲಿ 'ಕನ್ನಡ ಸಂಘ'ವನ್ನು ಸ್ಥಾಪಿಸಲಾಯಿತು.

▪ **ವರದಿ: ಶೃತಿ ಬೆಳ್ಳಿಯಾರ್ ಎಚ್.ವಿ**

# ವೈದ್ಯಕೀಯ ವಿದ್ಯಾರ್ಥಿಗಳಿಗೆ ಬಿಳಿಯ ಸಮವಸ್ತ್ರಧಾರಣೆ ಸಮಾರಂಭ

"ವೈದ್ಯಕೀಯ ಕ್ಷೇತ್ರ ಎಂದರೆ ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿಯೂ ಅತ್ಯಮೂಲ್ಯವಾದ ವಲಯವಾಗಿರುತ್ತದೆ. ಎಲ್ಲಾ ಸಮಾಜಗಳಲ್ಲೂ ಹೆಚ್ಚು ಗೌರವ ಇರುವ ವೃತ್ತಿಯೆಂದರೆ ವೈದ್ಯವೃತ್ತಿ. ವಿದ್ಯಾರ್ಥಿಗಳು ತಮ್ಮ ತಂದೆ–ತಾಯಿಗಳ ಕನಸು–ನನಸು ಮಾಡಲು ಭಾರಿ ಪರಿಶ್ರಮ ಪಡಬೇಕು. ನಿರಂತರ ಕಲಿಕೆಯಿಂದ ವೈದ್ಯವೃತ್ತಿ ಶ್ರೇಷ್ಠವಾಗುತ್ತದೆ" ಎಂದು ಕರ್ನಾಟಕ ರಾಜ್ಯದ ಕರ್ನಾಟಕ ಕೃಷಿ ಬೆಲೆ ಆಯೋಗ ಮತ್ತು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಅಧ್ಯಕ್ಷರಾದ ಅಶೋಕ್ ದಳವಾಯಿ ಅಭಿಪ್ರಾಯಪಟ್ಟರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ನವೆಂಬರ್ 4 ರಂದು 2025–26ನೇ ಸಾಲಿನ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವೈದ್ಯವೃತ್ತಿಯ ಸಂಕೇತವಾಗಿರುವ ಬಿಳಿಯ ಸಮವಸ್ತ್ರಧಾರಣೆ (White Coat Ceremony) ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಅಶೋಕ್ ದಳವಾಯಿರವರು "ಈ ಶ್ವೇತ ಸಮವಸ್ತ್ರ ವೈದ್ಯಕೀಯ ಲೋಕದ ಸಂಕೇತವಾಗಿದ್ದು, ಇದು ಸದಾ ವೈದ್ಯರಿಗೆ ಅವರ ಜವಾಬ್ದಾರಿಯ ಅರಿವನ್ನು ಮೂಡಿಸುತ್ತದೆ" ಎಂದರು.

ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾದ ಆಗಮಿಸಿದ್ದ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಆರ್. ರಾಜಶೇಖರ್ ಅವರು "ಬಿಳಿಯ ಸಮವಸ್ತ್ರಧಾರಣೆ ಕೇವಲ ಒಂದು ಆಚರಣೆಯಲ್ಲ, ಜವಾಬ್ದಾರಿಯ ಸೇವಾ ಮನೋಭಾವದ ಸಂಕೇತ. ವೈದ್ಯಕೀಯ ಕ್ಷೇತ್ರದಲ್ಲಿ 'ಬೋಧನೆ ಮತ್ತು ಚಿಕಿತ್ಸೆ' ಎರಡು ಜವಾಬ್ದಾರಿಗಳು ಪ್ರಮುಖವಾಗಿರುತ್ತದೆ. ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯಲು ಬಂದಿರುವುದು ಅವರ ತಂದೆ–ತಾಯಿಗಳ ಶ್ರಮ ಮತ್ತು ತ್ಯಾಗದ ಪ್ರತಿಫಲವಾಗಿದೆ. ಅದನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು" ಎಂದರು.




**ಬೆಂಗಳೂರಿನ ಕರ್ನಾಟಕ ಕೃಷಿ ಬೆಲೆ ಆಯೋಗದ ಮತ್ತು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಅಧ್ಯಕ್ಷರಾದ ಅಶೋಕ್ ದಳವಾಯಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಆರ್. ರಾಜಶೇಖರ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್, ಡಾ. ರಮಣ್ ಎಂ ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಡಾ. ಲಾವಣ್ಯ, ಅಂಬಿಕಾ ಎಂ. ಹುಲಿನಾಯ್ಕರ್, ಡಾ. ಎಂ.ಎಲ್. ಹರೇಂದ್ರಕುಮಾರ್, ಡಾ. ರೇಖಾಗುರುಮೂರ್ತಿ ಮತ್ತು ಡಾ. ಎಂ.ಎನ್. ಹೇಮಂತ್‌ರಾಜ್.**

ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ ಹುಲಿನಾಯ್ಕರ್ ಅವರು ವೈದ್ಯ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿ, "ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಅವಧಿಯಲ್ಲಿ ಸಮಯ ಪರಿಪಾಲನೆ, ಕಾರ್ಯತತ್ಪರತೆ ಮತ್ತು ಜನರ ನೋವಿಗೆ ಸ್ಪಂದಿಸುವ ಮನೋಭಾವನೆಯನ್ನು ಬೆಳೆಸಿಕೊಂಡು ಉತ್ತಮ ಆರೋಗ್ಯಕರ ಸಮಾಜದ ಕಲ್ಪನೆಯನ್ನು ಸಾಕಾರಗೊಳಿಸಲು ಶ್ರಮಿಸಬೇಕು" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು "ವೈದ್ಯಕೀಯ ವಿದ್ಯಾರ್ಥಿಗಳಿಗೆ ಶುಭ ಕೋರಿ, ಈ ವರ್ಷ ಸುಮಾರು 12 ರಿಂದ 13 ಲಕ್ಷ ವಿದ್ಯಾರ್ಥಿಗಳು ವೈದ್ಯಕೀಯ ಪ್ರವೇಶ ಪರೀಕ್ಷೆ ಬರೆದಿದ್ದರು, ಅದರಲ್ಲಿ ಕೇವಲ 1 ಲಕ್ಷ ವಿದ್ಯಾರ್ಥಿಗಳಿಗೆ ಮಾತ್ರ ವೈದ್ಯಕೀಯ ಕಾಲೇಜಿನ ಪ್ರವೇಶಕ್ಕೆ ಅನುಮತಿ ದೊರಕಿದೆ. ಆ ವಿದ್ಯಾರ್ಥಿಗಳಲ್ಲಿ ನೀವು ಸಹ ಒಬ್ಬರು. ಇದು ನಿಮ್ಮ ಶ್ರಮದ ಪ್ರತಿಫಲವಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳು ಐದು ವರ್ಷಗಳ ಅವಧಿಯಲ್ಲಿ ಪ್ರತಿದಿನವು ಹೊಸದನ್ನು ಕಲಿಯುತ್ತಾ ಹೋಗಬೇಕು. ಉತ್ತಮ ಜ್ಞಾನವನ್ನು ಸಂಪಾದಿಸಬೇಕು. ನಿರಂತರ ಓದು, ಪರಿಶ್ರಮ, ತರಗತಿಗಳಿಗೆ ಕಡ್ಡಾಯ ಹಾಜರಾತಿ, ಗುರು–ಹಿರಿಯರಿಗೆ ಗೌರವ ಸೂಚಿಸುವುದು, ರೋಗಿಗಳ ಕಷ್ಟಕ್ಕೆ ಮಾನವೀಯತೆ ಮತ್ತು ಅನುಕಂಪದಿಂದ ಸ್ಪಂದಿಸುವುದು ಮೊದಲಾದವುಗಳನ್ನು ಈ ಅವಧಿಯಲ್ಲಿ ಕಲಿಯಬೇಕು" ಎಂದರು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಅಧ್ಯಕ್ಷರಾದ ಅಶೋಕ್ ದಳವಾಯಿ ಮತ್ತು ಕರ್ನಾಟಕ ರಾಜ್ಯ ಖಾತರಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಿಯಾದ ಆರ್. ರಾಜಶೇಖರ್ ಅವರನ್ನು ಸನ್ಮಾನಿಸಲಾಯಿತು. 2025–26ನೇ ಸಾಲಿನ ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ರಾಜ್ಯ ಶಾಖೆಯ ನೂತನ ಕಾರ್ಯದರ್ಶಿಯಾದ ಡಾ.ನಳಿನ ಯಶವಂತ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

▪ **ವರದಿ: ಆನಂದ್ ಎನ್.**

## ಶಿಕ್ಷಣದ ಕ್ಷೇತ್ರದ ಪದವಿಗಳಲ್ಲಿ ಮೇಲು, ಕೀಳು ಭಾವನೆ ಅಪಾಯಕಾರಿ

'ಮೆಡಿಕಲ್, ಇಂಜಿನಿಯರಿಂಗ್ ಶಿಕ್ಷಣವೇ ಪರಮ ಶ್ರೇಷ್ಠ. ಆರ್ಟ್ಸ್, ಕಾಮರ್ಸ್ ಮೊದಲಾದವು ಕೀಳು ಎಂಬ ಭಾವನೆ ಅಪಾಯಕಾರಿ ಬೆಳವಣಿಗೆ' ಈ ಮಾತು ಹೇಳಿದವರು ತುಮಕೂರಿನ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಬಾಲಗುರುಮೂರ್ತಿ. ಸಂದರ್ಭ: ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ವಿಜ್ಞಾನ ವಿದ್ಯಾರ್ಥಿಗಳಿಗಾಗಿ ನವೆಂಬರ್ 13 ರಂದು ಏರ್ಪಡಿಸಿದ್ದ ಶ್ರೀ ಅನ್ವೇಷಣೆ–2025 ಶೈಕ್ಷಣಿಕ ಪ್ರತಿಭಾ ಕಾರ್ಯಕ್ರಮ.

"ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವೇ ಉತ್ತಮ, ಆರ್ಟ್ಸ್ ಮತ್ತು ಕಾಮರ್ಸ್ ಕೀಳು ಎಂಬ ಮನೋಭಾವ, ಸಮಾಜದಲ್ಲಿ, ಪೋಷಕರಲ್ಲಿ ಹೆಚ್ಚಾಗುತ್ತಿದೆ. ಇದು ಆತಂಕಕಾರಿ. ಇದರ ನಡುವೆಯೂ ಒಂದು ಸಮಾಧಾನಕರ ಸಂಗತಿ ಎಂದರೆ ಭಾರತ ಸರ್ಕಾರದ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಇಂತಹ ತಾರತಮ್ಯ ನಿವಾರಿಸಿ ಹೊಸ ಭರವಸೆ ಮೂಡಿಸುವಲ್ಲಿ ಕೊಂಚಮಟ್ಟಿಗೆ ಸಹಕಾರಿಯಾಗಿದೆ. ಉದಾಹರಣೆಗೆ, ವಿಜ್ಞಾನದ ವಿದ್ಯಾರ್ಥಿ ಇಷ್ಟಪಟ್ಟರೆ ರಾಜಕೀಯ, ಸಮಾಜಶಾಸ್ತ್ರವನ್ನು ಅಭ್ಯಾಸ ಮಾಡಬಹುದು. ಅದೇ ರೀತಿ ಕಲಾವಿಭಾಗದ ವಿದ್ಯಾರ್ಥಿಗೆ ಆಸಕ್ತಿಯಿದ್ದರೆ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರವನ್ನು ಅಭ್ಯಾಸ ಮಾಡಬಹುದು" ಎಂದು ಬಾಲಗುರುಮೂರ್ತಿ ಅವರು ಉದಾಹರಣೆ ನೀಡಿದರು.

"ತುಮಕೂರು ಜಿಲ್ಲೆಯಲ್ಲಿ ಅರವತ್ತು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಇದರಲ್ಲಿ ಮೂವತ್ತು ಸಾವಿರ ವಿದ್ಯಾರ್ಥಿಗಳು ವಿಜ್ಞಾನದ ವಿಷಯ ಕಲಿಯುತ್ತಿದ್ದಾರೆ. ಜ್ಞಾನ ಎಂದಿಗೂ ಅಹಂಕಾರ ಕೊಡುವುದಿಲ್ಲ ಬದಲಿಗೆ ವಿವೇಕ ಮತ್ತು ಎತ್ತರದ ಸ್ಥಾನಕ್ಕೆ ತೆಗೆದುಕೊಂಡು ಹೋಗುತ್ತದೆ. ಇತ್ತೀಚಿನ ದಿನಗಳಲ್ಲಿ ಕಾಮರ್ಸ್ ವಿಷಯ ಜಾಗತಿಕ ಮಹತ್ವ ಪಡೆಯುತ್ತಿದೆ. ಅದರಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ದೊರಕುತ್ತಿವೆ. ಕಾಲೇಜಿನ ಕ್ಲಾಸ್ ಪರೀಕ್ಷೆಗಳಿಗಿಂತ ಜೀವನದ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಮುಖ್ಯ".

▸▸ 6ನೇ ಪುಟಕ್ಕೆ...

# ಹಾಲುಮತವು ಭಾರತದ ಧಾರ್ಮಿಕ ಆಧಾರಸ್ತಂಭ

■ ವರದಿ: ಕೆ. ಎಸ್. ರಾಜಮನ್ನಾರ್

"ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಇರುವ ಸಮಾಜಗಳಲ್ಲಿ ದಲಿತರು ಮತ್ತು ಮುಸ್ಲಿಂ ಸಮುದಾಯ ಹೊರತುಪಡಿಸಿದರೆ ಕುರುಬರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕುರುಬರು ಈ ದೇಶದ ಮೂಲ ನಿವಾಸಿಗಳು. ಹಾಲುಮತದವರು ಮತ್ತು ಕುರುಬರು ಒಂದೇ. ಕೋಲೂರು ಮಲ್ಲಪ್ಪ ಕುರುಬರ ಮಹಾನಾಯಕ. ಕುರುಬರು ಚಾರಿತ್ರಿಕವಾಗಿ ದೇಶದ ಮೂಲ ನಿವಾಸಿಗಳು ಎಂಬುದನ್ನು ದಾಖಲಿಸುವ ಮೂಲಕ ಸಂಶೋಧನೆ ನಡೆಸಿದವರು ವಿ. ಆರ್. ಹನುಮಂತಯ್ಯ. ಅವರು ನೂರು ವರ್ಷಗಳ ಹಿಂದೆಯೇ ಈ ಮಹಾನ್ ಕೆಲಸ ಮಾಡಿದ್ದಾರೆ" ಎಂದು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ, ಮಾಜಿ ಸಚಿವ ಹೆಚ್.ಎಂ. ರೇವಣ್ಣ ಅವರು ಪ್ರತಿಪಾದಿಸಿದ್ದಾರೆ. ಬೆಂಗಳೂರಿನಲ್ಲಿ ನವೆಂಬರ್ 9 ರಂದು ಹಾಲುಮತ ಅಧ್ಯಯನ ಪೀಠ, ಹಂಪಿ ಕನ್ನಡ ವಿಶ್ವವಿದ್ಯಾಲಯ ಮತ್ತು ಕನಕದಾಸ ಆಧ್ಯಾತ್ಮ ಪ್ರತಿಷ್ಠಾನ ಜಂಟಿಯಾಗಿ ಆಯೋಜಿಸಿದ್ದ ವಿ. ಆರ್. "ಹನುಮಂತಯ್ಯ ಅವರ ಕುರುಬ ಚರಿತ್ರೆ" ಎಂಬ ಗ್ರಂಥದ ಪ್ರಕಟಣೆಯ ಶತಮಾನದ ಸ್ಮರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ತುಮಕೂರಿನ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಮುಖ್ಯ ಅತಿಥಿಗಳಾಗಿ ಸಮಾರಂಭದಲ್ಲಿ ಪಾಲ್ಗೊಂಡು, ಮಾತನಾಡುತ್ತಾ " 1936ರಲ್ಲಿ ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಆರನೂರನೆಯ ವರ್ಷದ ಸಮಾರಂಭ ಜರುಗಿತ್ತು. ಅದರಲ್ಲಿ ಕನ್ನಡ ಕುಲಪುರೋಹಿತರೆಂದು ಖ್ಯಾತರಾಗಿದ್ದ ಆಲೂರು ವೆಂಕಟರಾಯರ ಬಗ್ಗೆ ದಾಖಲೆಯಿದೆ. ಅದೇ ಸಮ್ಮೇಳನದಲ್ಲಿ ವಿಜಯನಗರ ಸಾಮ್ರಾಜ್ಯದ ಮೇಲೆ ಗ್ರಂಥ ಬರೆದು ಬಿಡುಗಡೆ ಮಾಡಿಸಿದ ವಿ.ಆರ್. ಹನುಮಂತಯ್ಯ ಅವರ ಬಗ್ಗೆ ದಾಖಲೆ ಇಲ್ಲ. ಯಾರು ಇತಿಹಾಸ ನಿರ್ಮಿಸುತ್ತಾರೋ ಅವರು ತಮ್ಮ ಸಾಧನೆಯನ್ನು ದಾಖಲು ಮಾಡಬೇಕು. ಅವರು ಕುರುಬರ ಚಾರಿತ್ರಿಕವಾದ ಕೆಲಸಗಳನ್ನು ಮಾಡಿದ್ದರು. ಅದು ದಾಖಲು ಆಗಿಲ್ಲ. 1926–27ರ ಅವಧಿಯಲ್ಲಿ ಲಕ್ಷ್ಮೇಶ್ವರಲ್ಲಿ ಬಾಂಬೆ ಪ್ರಾಂತ್ಯದ ಕುರುಬರ ಸಮ್ಮೇಳನ ನಡೆದಿದೆ. ಅದರ ಫಲವಾಗಿ ವಿದ್ಯಾರ್ಥಿಗಳಿಗೆ ಹಾಸ್ಟಲ್ ನಿರ್ಮಾಣವಾಗಿದೆ. 1928ರಲ್ಲಿ ಅಂದರೆ ಸಿಂಡಿಕೇಟ್ ಬ್ಯಾಂಕ್ ಪ್ರಾರಂಭಕ್ಕೆ ಮುಂಚೆ ಕುರುಬರು ತಮ್ಮದೇ ಆದ ಬ್ಯಾಂಕ್ ಸ್ಥಾಪಿಸಿದ್ದರು. ಅದರ ದಾಖಲಾತಿ ಕೂಡ ಎಲ್ಲೂ ಕಾಣಬರುವುದಿಲ್ಲ. ದಕ್ಷಿಣ ಕರ್ನಾಟಕದಲ್ಲಿ ಮಾನ್ಯ ಹನುಮಂತಯ್ಯ ಅವರಿಂದಾಗಿ ಕುರುಬ ಸಮುದಾಯದ ಪರಂಪರೆ ಮತ್ತು ಸಾಧನೆಗಳ ದಾಖಲೆಯ ಕಾರ್ಯ ನಡೆದಿದೆ. ವಿ.ಆರ್. ಹನುಮಂತಯ್ಯ ಅವರು ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಪ್ರಭುತ್ವವನ್ನು ಪಡೆದಿದ್ದರು. ಅದು ಅವರ ಸಾಹಿತ್ಯಕೃತಿಗಳಲ್ಲಿ ಪ್ರತಿಫಲನವಾಗಿದೆ. ಈ ಸಮಾರಂಭ ನಡೆಯುವ ತನಕ ಅವರ ವಿಚಾರವನ್ನು ಎಲ್ಲರೂ ಮರೆತುಬಿಟ್ಟಿದ್ದರು. ಅವರನ್ನು ನೆನಪು ಮಾಡಿಕೊಟ್ಟಿದ್ದಕ್ಕಾಗಿ ಪ್ರೊ. ಹಳ್ಳಿಕೇರಿ ಅವರನ್ನು ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಭಾರತೀಯ ಚರಿತ್ರೆಯಲ್ಲಿ ಹಾಲುಮತ ಸಮಾಜದ ಕೊಡುಗೆ ಮಹತ್ವಪೂರ್ಣವಾದದ್ದು. ಈ ಅಂಶಗಳ ಬಗ್ಗೆ ಸಮಾಜದ ಚಿಂತಕರು, ಬುದ್ದಿಜೀವಿಗಳು, ಮುಂದಿನ ಪೀಳಿಗೆಗೆ ಮನದಟ್ಟು ಮಾಡಿಕೊಡಬೇಕಿದೆ. ಸಮಾಜಕ್ಕೆ ಬೆಳಕು ಹಾಗೂ ಪ್ರೇರಣೆ ನೀಡುವ, ಯುವಜನಾಂಗವನ್ನು ಸನ್ಮಾರ್ಗದಲ್ಲಿ ನಡೆಸುವಂತಹ ಮಹತ್ತ್ವದ ಕೃತಿಗಳನ್ನು ಶ್ರೀದೇವಿ ಪ್ರಕಟಣಾ ವಿಭಾಗದಿಂದ ಉಚಿತವಾಗಿ ಮುದ್ರಣ ಮಾಡಿಕೊಡಲಾಗುವುದು" ಎಂದರು.

ಕಾರ್ಯಕ್ರಮದಲ್ಲಿ ಹಂಪಿ ವಿಶ್ವವಿದ್ಯಾಲಯದ ಕುಲಪತಿ ಡಾ. ಪರಶಿವಮೂರ್ತಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಚೆನ್ನಪ್ಪ ಕಟ್ಟಿ, ಕೃತಿಯ ಲೇಖಕ ಮತ್ತು ಸಂಪಾದಕ ಎಫ್.ಟಿ. ಹಳ್ಳಿಕೇರಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.




### ಹನುಮಂತಯ್ಯ ಎಲ್ಲಿಯವರು?

**ಬೆಂಗಳೂರು ಜಿಲ್ಲೆಯ ಉತ್ತರ ತಾಲೂಕಿನ ವಿಶ್ವನಾಥಪುರ ಎಂಬ ಹಳ್ಳಿಯಲ್ಲಿ 1878ರಲ್ಲಿ ಜನನ. ತಂದೆ ಬೀದಿ ಮನೆ ರಂಗಣ್ಣ. ತಾಯಿ ತಿಮ್ಮಕ್ಕ. ಶಾಲಾಶಿಕ್ಷಕರಾಗಿ ಜೀವನ ಆರಂಭ. ಸಾಹಿತ್ಯರಂಗದಲ್ಲೂ ಅಳಿಸಲಾಗದ ಅನನ್ಯ ಸೇವೆ. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಯಲ್ಲಿರುವ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ ತಾವು ಸಂಗ್ರಹಿಸಿದ ಜ್ಞಾನಸಂಪತ್ತನ್ನು ಸಮಾಜಕ್ಕೆ ಕಾಣಿಕೆಯಾಗಿ ಅವರು ನೀಡಿದ್ದಾರೆ. ಕುರುಬರ ಆಚರಣೆ, ಕುರುಬರ ಸಾಮ್ರಾಜ್ಯ ಮತ್ತು ಕುರುಬರ ವೃತ್ತಿ ಹೀಗೆ ಕುರುಬ ಸಮುದಾಯದ ಇತಿಹಾಸ ಅರಿತುಕೊಳ್ಳಲು ಅವರ ಕೃತಿ ಸಹಾಯವಾಗುತ್ತದೆ. ಅದಕ್ಕೆ ಮೊದಲು ಅವರ ಜೀವನ, ಸಾಹಿತ್ಯ ಅರ್ಥ ಮಾಡಿಕೊಂಡರೆ ಕುರುಬ ಸಮಾಜದ ಭವ್ಯಪರಂಪರೆ ಮತ್ತು ಸುದೀರ್ಘ ಇತಿಹಾಸ ಮನದಟ್ಟಾಗುತ್ತದೆ.**

## ಶಿಕ್ಷಣದ ಕ್ಷೇತ್ರದ ಪದವಿಗಳಲ್ಲಿ ಮೇಲು, ಕೀಳು ಭಾವನೆ ಅಪಾಯಕಾರಿ

▶▶ 5ನೇ ಪುಟದಿಂದ

ತುಮಕೂರು ಜಿಲ್ಲೆಯನ್ನು ಕರ್ಮಭೂಮಿಯನ್ನಾಗಿಸಿಕೊಂಡು, ಸತತ ಪರಿಶ್ರಮದಿಂದ ರಾಜ್ಯಕ್ಕೆ ಮಾದರಿಯಾಗುವಂತಹ ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳೆಸಿ, ಜಿಲ್ಲೆಯ ವೈದ್ಯಕೀಯ, ಶಿಕ್ಷಣವಲಯಕ್ಕೆ ಡಾ. ಎಂ.ಆರ್. ಹುಲಿನಾಯ್ಕರ್ ನೀಡಿರುವ ಕೊಡುಗೆ, ಮಾಡಿರುವ ಸಾಧನೆ ಅನನ್ಯ ಮತ್ತು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದು ಎಂದು ಉಪನಿರ್ದೇಶಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಮತ್ತೊಬ್ಬ ಮುಖ್ಯ ಅತಿಥಿ, ಸರ್ವೋದಯ ಸಮೂಹ ಶಿಕ್ಷಣಸಂಸ್ಥೆ ಕಾರ್ಯದರ್ಶಿ ಕೆ.ವಿ.ಸುಬ್ಬರಾವ್ "ಪಾಠದ ಜೊತೆಗೆ ಸಂಸ್ಕಾರ, ವಿಶೇಷವಾಗಿ ನೈತಿಕಶಿಕ್ಷಣ ಮುಖ್ಯವಾಗಿದೆ. ಸಂಸ್ಕಾರವಿಲ್ಲದ ಶಿಕ್ಷಣ ಅಧಃಪತನಕ್ಕೆ ನೂಕುತ್ತದೆ ಎಂಬುದಕ್ಕೆ ಎಲ್ಲ ಜಿಲ್ಲೆಗಳಲ್ಲಿ ಮತ್ತು ಎಲ್ಲೆಂದರಲ್ಲಿ ನಾಯಿಕೊಡೆಯಂತೆ ಹುಟ್ಟಿಕೊಳ್ಳುತ್ತಿರುವ ವೃದ್ಧಾಶ್ರಮಗಳೇ ಸಾಕ್ಷಿಯಾಗಿದೆ" ಎಂದರು.

ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ. ನರೇಂದ್ರ ವಿಶ್ವನಾಥ್ ಅವರು "ಸೋಲು ಜೀವನದ ಕೊನೆಯಲ್ಲ. ಆದರೆ ಪ್ರಯತ್ನ ಮಾತ್ರ ಎಂದಿಗೂ ಕೊನೆಯಾಗಬಾರದು" ಎಂದರು.

ಕ್ವಿಜ್ ಪ್ರದರ್ಶನದಲ್ಲಿ ಪ್ರೆಸಿಡೆನ್ಸಿ ಪಿ.ಯು. ಕಾಲೇಜಿನ ಪ್ರಥಮ ಬಹುಮಾನ ಎಲ್. ನೂತನ್ ಕುಮಾರ್, ಮತ್ತು ವಿರಾಟ್ ಎನ್. ಗೌಡ, ಸರ್ಕಾರಿ ಪಿ.ಯು. ಕಾಲೇಜಿನ ದ್ವಿತೀಯ ಬಹುಮಾನವನ್ನು ಎಂ.ಜಿ. ಸ್ನೇಹ ಮತ್ತು ಅಭಿಷ್ಯಂತ್, ತೃತೀಯ ಬಹುಮಾನವನ್ನು ಬಿ.ಎಸ್. ಕೀರ್ತಿ ಮತ್ತು ಆರ್.ಎ. ನಯನಾ ಪಡೆದುಕೊಂಡರು.

ಭಿತ್ತಿ ಪತ್ರಗಳ ಸ್ಪರ್ಧೆಯಲ್ಲಿ ತುರುವೇಕೆರೆ ಸರ್ಕಾರಿ ಪ್ರಥಮ ದರ್ಜೆ ಎಂ.ಬಿ. ಕಾಲೇಜಿನ ಸಿಂಚನಾ, ಹೆಚ್. ಎಸ್ ಮಾನಸ, ಎ.ಎನ್. ಧನಲಕ್ಷ್ಮಿ ಮತ್ತು ಎಸ್. ಸೋನಾಕ್ಷಿ ಪ್ರಥಮ ಬಹುಮಾನ ಗಳಿಸಿದ್ದಾರೆ.

ಮಾಡೆಲ್ ಪ್ರದರ್ಶನದಲ್ಲಿ ಶ್ರೀಸಪ್ತಗಿರಿ ಪಿ.ಯು. ಕಾಲೇಜಿನ ಹರ್ಷ ಪಿ, ಹೊನೇಶ್ ಅವರಿಗೆ ಪ್ರಥಮ ಬಹುಮಾನ ಮತ್ತು ಪಿ.ಎ ಅಮೋಘಸಿಂಹ ಮತ್ತು ಶುಭೋದಯ ಪಿ.ಯು. ಕಾಲೇಜಿನ ಎ ಸರನ್, ಮತ್ತು ಬಿ.ಎಸ್. ಶ್ರೇಯಸ್ ದ್ವಿತೀಯ ಬಹುಮಾನ ಪಡೆದಿದ್ದಾರೆ. ಶ್ರೀ ಅನ್ವೇಷಣಾ ಸ್ಪರ್ಧೆಯಲ್ಲಿ ತುಮಕೂರು ಜಿಲ್ಲೆ ಎಲ್ಲಾ ತಾಲೂಕಿನ ಹಾಗೂ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

■ ವರದಿ: ಆನಂದ್ ಎನ್.

# ಸೆಮಿಕಂಡಕ್ಟರ್: ಡಿಜಿಟಲ್ ಆರ್ಥಿಕತೆಯ ದೈತ್ಯಶಕ್ತಿ

▶▶ 4ನೇ ಪುಟದಿಂದ

ಉದ್ಯಮ – ವಿಶ್ವವಿದ್ಯಾಲಯ ಸಹಕಾರದಲ್ಲಿ Capstone Project Based Learning, ಹೈ ಎಂಡ್ ಲ್ಯಾಬ್‌ಗಳು ಮತ್ತು Internship ಅನಿವಾರ್ಯ. ಇನ್ನಷ್ಟು ಪೂರಕ ಕ್ರಮಗಳೆಂದರೆ (ತೈವಾನ್, ಅಮೆರಿಕ, ಜಪಾನ್‌ಗಳ ಜೊತೆಗೆ) Global Collaboration. Domestic Supply Chain Development, ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಹೆಚ್ಚಿನ ಬಂಡವಾಳದ ಹೂಡಿಕೆ. ಸ್ಟಾರ್ಟ್–ಅಪ್‌ಗಳಿಗೆ ಹಣಕಾಸಿನ ನೆರವು, ತಾಂತ್ರಿಕ, ಮಾರ್ಗದರ್ಶನ. ಸರ್ಕಾರ, ಉದ್ಯಮ, ಅಕಾಡೆಮಿಯಾ – Triple Helix Model ಕಾರ್ಯಗತಗೊಳಿಸಬೇಕು.

**Magic of Semiconductor ಎಂದರೇನು?**

ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರ ಅಭಿಪ್ರಾಯದಂತೆ ಒಂದು ಚಿಪ್ಪಿನಲ್ಲಿ ಕೋಟ್ಯಂತರ ಟ್ರಾನ್ಸಿಸ್ಟರ್‌ಗಳಿರುತ್ತವೆ. ಅವು ಎಲೆಕ್ಟ್ರಾನ್ ಹರಿವನ್ನು ನಿಯಂತ್ರಿಸಿ "ಮೆಮೊರಿ ಲಾಜಿಕ್ ಪ್ರೊಸೆಸಿಂಗ್" ಕಾರ್ಯ ನಿರ್ವಹಿಸುತ್ತವೆ. ಈ ತಂತ್ರಜ್ಞಾನವೇ ಇಂದಿನ Artificial Intelligence, 5G, IoT, Space Tech ಹೀಗೆಲ್ಲ ಕ್ಷೇತ್ರಗಳ ಬೆನ್ನೆಲುಬಾಗಿದೆ. ಅದರ 'ಮ್ಯಾಜಿಕ್' ಎಂದರೆ ಅತಿಸೂಕ್ಷ್ಮ ಮಟ್ಟದಲ್ಲಿ ಅಸಾಧ್ಯವೆನಿಸುವ ಲೆಕ್ಕಾಚಾರಗಳನ್ನು ನ್ಯಾನೋ ಸೆಕೆಂಡ್‌ಗಳಲ್ಲಿ ಮಾಡಿಸುವ ಸಾಮರ್ಥ್ಯವನ್ನು ಪಡೆಯಲಿದೆ.

**ಬೆಂಗಳೂರಿನ ಪಾತ್ರ:**

ಈಗಾಗಲೇ 200ಕ್ಕೂ ಹೆಚ್ಚು ಚಿಪ್ ವಿನ್ಯಾಸ ಮಾಡುವ ಕಂಪನಿಗಳು Silicon Valley of India ಎಂದೆನಿಸಿಕೊಂಡಿರುವ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿವೆ. Intel, Qualcomm, Texas Instruments, AMD ಮುಂತಾದ ಕಂಪನಿಗಳ Design & R&D ಸೆಂಟರ್‌ಗಳು ಇಲ್ಲಿವೆ. ಶ್ರೇಷ್ಠ ಮಾನವಸಂಪನ್ಮೂಲ ಇಲ್ಲಿ ಇದೆ (IISc, IIIT, NITs, Start-ups). ಹೀಗಾಗಿ Design Capital of Semiconductors ಆಗಿ ಬೆಂಗಳೂರು ಜಾಗತಿಕ ನಕ್ಷೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆಯಬಲ್ಲದು.

**ಭವಿಷ್ಯದ ಸವಾಲುಗಳು:**

ಉತ್ತರ ಪ್ರದೇಶ, ಭುವನೇಶ್ವರ, ಗುಜರಾತ್, ಪಂಜಾಬ್, ಆಂಧ್ರಪ್ರದೇಶ ಮತ್ತು ಅಸ್ಸಾಂ ಸೇರಿದಂತೆ ಆರು ರಾಜ್ಯಗಳಲ್ಲಿ ಸೆಮಿಕಂಡಕ್ಟರ್ ಚಿಪ್ ತಯಾರಿಕಾ ಘಟಕಗಳು ಆರಂಭವಾಗಲಿದೆ. ಹೆಚ್ಚು ಸವಾಲಿನ ಕೆಲಸ ಎಂದರೆ ಪ್ಯಾಕೇಜಿಂಗ್. ಅದಕ್ಕೆ ಸೂಕ್ತ ತರಬೇತಿ, ನೀಡಿ ಅರ್ಹ ಸೆಮಿಕಂಡಕ್ಟರ್ ಇಂಜಿನಿಯರ್‌ಗಳನ್ನು ರೂಪಿಸುವುದು, ಈ ಘಟಕಗಳಿಗೆ ನೀರು ಪೂರೈಕೆ ಮಾಡುವುದು ಎಂದು ಸಂದರ್ಶನದಲ್ಲಿ ತಜ್ಞರು ವಿವರಿಸಿದ್ದಾರೆ.

**ಕಚ್ಚಾ ಪದಾರ್ಥ:**

ಸೆಮಿಕಂಡಕ್ಟರ್ ಉದ್ಯಮಕ್ಕೆ ಬೇಕಾದ ಕಚ್ಚಾ ಪದಾರ್ಥಗಳು ರಾಜಸ್ಥಾನ, ಗುಜರಾತ್ ತಮಿಳುನಾಡಿನಲ್ಲಿ ಲಭ್ಯವಾಗಲಿದೆ. ಸಿಲಿಕಾನ್ ಮರಳಿನಲ್ಲಿ ದೊರೆಯುವ ಒಂದು ವಸ್ತು. ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಅಲ್ಪ ಪ್ರಮಾಣದಲ್ಲಿ ಸಿಲಿಕಾನ್ ಮೈನಿಂಗ್ ನಡೆಯುತ್ತಿವೆ. ಇನ್ನು ವಿಶ್ವ ಮಟ್ಟದಲ್ಲಿ ಹೇಳುವುದಾದರೆ ರಷ್ಯಾ, ಬ್ರೆಜಿಲ್, ನಾರ್ವೆ, ಚೈನಾ, ಅಮೆರಿಕ ದೇಶಗಳು ಕಚ್ಚಾ ಪದಾರ್ಥಗಳನ್ನು ದೊಡ್ಡ ಮಟ್ಟದಲ್ಲಿ ಉತ್ಪಾದಿಸುತ್ತಿವೆ. ಸರ್ಕಾರ ಇಲ್ಲಿಯವರೆಗೆ ಅನುಮೋದಿಸಿರುವ ಸೆಮಿಕಂಡಕ್ಟರ್ ಯೋಜನೆಗಳು ವರ್ಷಕ್ಕೆ 24 ಬಿಲಿಯನ್ ಚಿಪ್‌ಗಳನ್ನು ಉತ್ಪಾದಿಸುತ್ತವೆ ಮತ್ತು ಇನ್ನೂ ಹೆಚ್ಚಿನ ಯೋಜನೆಗಳು ಪ್ರಗತಿಯಲ್ಲಿವೆ. ಪ್ರಸ್ತುತ ಅಭಿವೃದ್ಧಿಪಡಿಸಲಾಗುತ್ತಿರುವ ಸಿಲಿಕಾನ್ ಆಧಾರಿತ ಚಿಪ್‌ಗಳಿಗಿಂತ ಹತ್ತು ಪಟ್ಟು ಚಿಕ್ಕ ಚಿಪ್‌ಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಎರಡು ವಸ್ತುಗಳು ಹೊಂದಿವೆ. ಭಾರತ ಜಾಗತಿಕ ಪೂರೈಕೆ ಸರಪಳಿಯಲ್ಲಿ ಭಾರತವು ವಿಶ್ವಾಸಾರ್ಹ ಪಾಲುದಾರನಾಗಿದೆ ಎಂಬ ಭರವಸೆಯ ಮಾತನ್ನು ಪ್ರಧಾನಿ ಹೇಳಿದ್ದಾರೆ.

■ ನಿರೂಪಣೆ: ಕೆ. ಎಸ್. ರಾಜಮನ್ನಾರ್


### ಐ.ಎಸ್.ಎಂ–2 ಯೋಜನೆಗೆ ಶೀಘ್ರ ಅನುಮೋದನೆ



**ದ್ವಾರಕೆಯ ಯಶೋಭೂಮಿಯಲ್ಲಿ ನಡೆದ ಸೆಮಿಕಂಡಕ್ಟರ್ ಸಮಾವೇಶ ಭಾರತದ ಪಾಲಿಗೆ ಅತ್ಯಂತ ಮಹತ್ವದ ಕ್ಷಣ. ಮುಂದಿನ 10 ವರ್ಷದಲ್ಲಿ ಸಾಧಿಸಬೇಕಿರುವ ಕೆಲಸಗಳನ್ನು ಪ್ರಧಾನಿ ಪಟ್ಟಿಮಾಡಿ ಹೇಳಿದ್ದಾರೆ. ಈ ಸಮಾವೇಶದಲ್ಲಿ 48 ರಾಷ್ಟ್ರಗಳ 350ಕ್ಕೂ ಹೆಚ್ಚು ಪ್ರದರ್ಶನ ಕಂಪನಿಗಳು ಭಾಗಿಯಾಗಿದ್ದವು. ಇಂಡಿಯಾ ಸೆಮಿಕಂಡಕ್ಟರ್ ಮಿಷನ್–2 ಯೋಜನೆಗೆ ಕೇಂದ್ರ ಸಂಪುಟದ ಅನುಮೋದನೆ ಶೀಘ್ರವೇ ದೊರಕಲಿದೆ.**

**ಅಶ್ವಿನಿ ವೈಷ್ಣವ್**
**ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ.**

**ನೆನಪಿನಲ್ಲಿಡಬೇಕಾದ ಮಾತು**



“ ‘ಕರ್ನಾಟಕ’ ನಾಮಕರಣಕ್ಕಾಗಿ ಹಾರೈಸಿದವರು, ಹೋರಾಡಿದವರು ರಾಜಕಾರಣಿಗಳಿಗಿಂತ ವಿಶೇಷವಾಗಿ ಕವಿಗಳು ಮತ್ತು ಸಾಹಿತಿಗಳು. ಕರ್ನಾಟಕತ್ವ ಮುಖ್ಯವಾಗಿ ಅವರ ವಿಜಯವಾಗಿದೆ. ಕರ್ನಾಟಕ ಎಂಬ ಹೆಸರನ್ನಾಗಲಿ ಏಕೀಕರಣವನ್ನಾಗಲಿ ನಾವು ಸಾಹಿತಿಗಳು ಬಯಸಿದ್ದು, ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಶ್ರೇಯೋಭ್ಯುದಯಗಳ ದೃಷ್ಟಿಯಿಂದಲೇ ಹೊರತು ರಾಜಕೀಯ ಕಾರಣಗಳಾಗಿ ಅಲ್ಲ.

- ರಾಷ್ಟ್ರಕವಿ ಕುವೆಂಪು
‘ವಿಚಾರ ಕ್ರಾಂತಿಗೆ ಆಹ್ವಾನ.’ ಪು ೮೨

# ಕನ್ನಡ ಕಾದಂಬರಿ ಪಿತಾಮಹರು - ಶ್ರೀ ಗಳಗನಾಥರು



▪ **ಪ್ರೊ.. ದುಷ್ಯಂತ ನಾಡಗೌಡ**
**ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು, ಮಾಜಿ ಅಧ್ಯಕ್ಷರು ಗಳಗನಾಥ ರಾಜಪುರೋಹಿತ ಪ್ರತಿಷ್ಠಾನ ಧಾರವಾಡ, ಮೊ.9972821896**

ಶ್ರೀ ಗಳಗನಾಥರು 19ನೇ ಶತಮಾನದ ಉತ್ತರಾರ್ಧದಲ್ಲಿ ನಡೆದ ಕನ್ನಡಭಾಷೆಯ ಕನ್ನಡನಾಡಿನ ಪುನರುತ್ಥಾನಕ್ಕೆ ಮಹತ್ವದ ಕಾಣಿಕೆಯನ್ನು ಸಲ್ಲಿಸಿದ ಪುಣ್ಯಪುರುಷರಲ್ಲೊಬ್ಬರು. ವಿಜಯನಗರ ಸಾಮ್ರಾಜ್ಯದ ಪತನ ಕ್ರಿ.ಶ. 1565ರ ಅನಂತರ ಸುಮಾರು 300 ವರ್ಷಗಳಲ್ಲಿ ಕನ್ನಡ–ಕನ್ನಡಿಗರು ತಮ್ಮ ಅಸ್ತಿತ್ವದ ಅರಿವನ್ನೇ ಕಳೆದುಕೊಂಡಿದ್ದರು. ಅದಕ್ಕೆ ಕಾರಣ ಮಾತೃಭಾಷೆಯಲ್ಲಿ ಸಿಗದ ಶಿಕ್ಷಣ. ಆಡಳಿತವೆಲ್ಲ ಬೇರೆ ಭಾಷೆಯಲ್ಲಿ ನಡೆಯುತ್ತಿತ್ತು. ಪರಸ್ಪರ ಮಾತನಾಡಲು ಬೇಕಾಗುವ ಓದು, ಮನರಂಜನೆ ಪಡೆದುಕೊಳ್ಳುವ, ಚರ್ಚೆಗೆ ಸಾಮಾಗ್ರಿಯಾಗಬಲ್ಲ ಸಾಹಿತ್ಯ ಹುಟ್ಟುತ್ತಿರಲಿಲ್ಲ. ಅಂತಹ ಸಾಹಿತ್ಯದ ಭಾರವನ್ನು ಹೊರುವ ಸಶಕ್ತ ಗದ್ಯ ಕನ್ನಡದಲ್ಲಿ ಬೆಳೆದು ಬಂದಿರಲಿಲ್ಲ. ಕನ್ನಡದ ಕೈಂಕರ್ಯಕ್ಕಾಗಿ 1890ರಲ್ಲಿ ಧಾರವಾಡದಲ್ಲಿ ‘ಕರ್ನಾಟಕ ವಿದ್ಯಾವರ್ಧಕ ಸಂಘ’ ಅಸ್ತಿತ್ವಕ್ಕೆ ಬಂತು. ಅದು ತನ್ನ ಘೋಷಿತ ಉದ್ದೇಶಗಳಲ್ಲೊಂದಾದ ಕನ್ನಡದಲ್ಲಿ ಗದ್ಯಸಾಹಿತ್ಯವನ್ನು ಬೆಳೆಸುವ ಕಾರ್ಯಕ್ರಮವಾಗಿ ಸ್ವತಂತ್ರ ಕಾದಂಬರಿಯೊಂದಕ್ಕೆ ಪ್ರತಿ ವರ್ಷ ಬಹುಮಾನ ಕೊಡುವ ಯೋಜನೆ ಹಾಕಿಕೊಂಡಿತು. ಗಳಗನಾಥರ ಪದ್ಮನಯನೆ 1896–97ರಲ್ಲಿ ಆ ಬಹುಮಾನವನ್ನು ಪಡೆದುಕೊಂಡಿತು. ಈ ಕೃತಿ 1898ರಲ್ಲಿ ಪ್ರಕಟಗೊಂಡಿತು. ಇದು ಕಾದಂಬರಿ ಕ್ಷೇತ್ರದಲ್ಲಿ ಗಳಗನಾಥರ ಮೊದಲ ಹೆಜ್ಜೆಯಾಗಿದೆ. ಮುಂದಿನ ಮೂವತ್ತು ವರ್ಷ ಇದೇ ಧ್ಯೇಯನಿಷ್ಠೆಯಿಂದ ತಮ್ಮ ಬರಹದ ಮೌಲ್ಯವನ್ನು ಕಡಿಮೆ ಮಾಡಿಕೊಳ್ಳದೆ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು, ಶ್ರೀ ಗಳಗನಾಥರು. ಗಳಗನಾಥರು 24 ಕಾದಂಬರಿಗಳಲ್ಲದೆ ಶೈಕ್ಷಣಿಕ, ಕೌಟುಂಬಿಕ ಸಾಹಿತ್ಯಕ್ಕೆ ಸಂಬಂಧಿಸಿದ ಒಟ್ಟು 60 ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕಾಣಿಕೆಯಾಗಿ ನೀಡಿದ್ದಾರೆ. ಅದಕ್ಕಾಗಿಯೇ ಅವರನ್ನು ಕನ್ನಡಿಗರು ‘ಪುಣ್ಯಪುರುಷರು’ ಎಂದು ಕೊಂಡಾಡಿದ್ದಾರೆ. ಶ್ರೀ ರಾ.ಹ. ದೇಶಪಾಂಡೆ, ಡೆಪ್ಯುಟಿ ಚನ್ನಬಸಪ್ಪ, ಗಂಗಾಧರ ಮ. ತುರುಮರಿ ಹಾಗೂ ಮುಳಬಾಗಿಲ ಅವರಂತವರು ಇದೇ ಸಾಲಿನಲ್ಲಿ ಬರುವ ಪುಣ್ಯಪುರುಷರು. ಮತ್ತೊಮ್ಮೆ ದೃಢವಾಗಿ ಹೇಳಬೇಕಾದದ್ದು ಇದು. “ಆಧುನಿಕ ಕರ್ನಾಟಕದ ಬೀಜ ಮೊಳೆತು ಕರ್ನಾಟಕದ ಏಳ್ಗೆಯಾದದ್ದು, ಧಾರವಾಡವನ್ನು ಕೇಂದ್ರವನ್ನಾಗಿಟ್ಟುಕೊಂಡು”!

ಹಾವೇರಿಯಿಂದ ಸ್ವಲ್ಪ ದೂರವಿರುವ ತುಂಗಭದ್ರೆ ವರದೆಯರ ಸಂಗಮವಾಗಿರುವ ಸುಂದರ ಪ್ರದೇಶ ದಲ್ಲಿರುವ ‘ಗಳಗನಾಥ’ ಊರಿನ ಶಾನುಭೋಗರ ಮಗನಾಗಿ ಹುಟ್ಟಿದ ಮಗು, ಮುಂದೆ ಅದೇ ಊರಿನ ಹೆಸರು ಸಮಸ್ತ ಕನ್ನಡಿಗರ ನೆನಪಿನಲ್ಲಿ ಉಳಿಯುವಂತಹ ಅಸಾಮಾನ್ಯ ವ್ಯಕ್ತಿಯಾಗಿ ಬೆಳೆದಿದ್ದು ಇತಿಹಾಸವಾಗಿದೆ. ಅವರ ಮೂಲಹೆಸರು ವೆಂಕಟೇಶ ತಿರಕೋ ಕುಲಕರ್ಣಿ. ಹುಟ್ಟಿದ್ದು ದಿನಾಂಕ 5.1.1869. ಸ್ಥಳೀಯ ದೇವರಾದ ಗಳಗೇಶ್ವರಸ್ವಾಮಿಯ ಸನ್ನಿಧಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ವೆಂಕಟೇಶ, 1885ರಲ್ಲಿ ಧಾರವಾಡದ ಶಿಕ್ಷಕ ತರಬೇತಿ ಟ್ರೈನಿಂಗ್ ಕಾಲೇಜಿಗೆ ಪ್ರವೇಶವನ್ನು ಪಡೆದರು. 1888ರಲ್ಲಿ ಶಿಕ್ಷಕರಾಗುವ ಅರ್ಹತೆ ಪಡೆದರು.

ಧಾರವಾಡದ ಸುಶಿಕ್ಷಿತ ಸಾಹಿತ್ಯಕ್ಷೇತ್ರದ ಪ್ರಭಾವದಿಂದಾಗಿ ಅಲ್ಲಿನ ತರುಣರು ಕನ್ನಡವನ್ನು “ಜೊತೆಯವರ ಕೂಟದಲ್ಲಿ ಕನ್ನಡ ತಲೆಯೆತ್ತಿ ನಿಲ್ಲುವಂತೆ” ಮಾಡಲು ಉತ್ಸಾಹದಿಂದ ಕಂಕಣಬದ್ಧರಾಗಿದ್ದ ಕಾಲವದು. ವೆಂಕಟೇಶ ಅವರ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲ್ ರಾವಾಜಿ ಕರಂದಿಕರ ಮತ್ತು ಇತರ ಶಿಕ್ಷಕರು ಹಾಗೂ ಹಿತೈಷಿಯಾಗಿ ಕಾಲೇಜಿಗೆ ಆಗಾಗ ಭೇಟಿಕೊಡುತ್ತಿದ್ದರು. ಕನ್ನಡ ಕಾರಣಪುರುಷ ರಾ.ಹ. ದೇಶಪಾಂಡೆ ಅವರು ವೆಂಕಟೇಶ ಅವರ ಸಾಹಿತ್ಯಶಕ್ತಿ ಮತ್ತು ಪ್ರತಿಭೆಯನ್ನು ಆಗಲೇ ಗುರುತಿಸಿದ್ದರು. ಆ ಕಾಲದ ಸಾಹಿತ್ಯ ಕಾದಂಬರಿ ರೂಪದಲ್ಲಿ ಹೊರಬರಲು ಪ್ರಾರಂಭವಾಗಿತ್ತು. ವೆಂಕಟೇಶ ಅವರು ಅಗಡಿ ‘ಆನಂದವನ’ ಪಾಠಶಾಲೆಯ ಮೂಲಕ ಪ್ರಕಟವಾಗುತ್ತಿದ್ದ ‘ಸದ್ಬೋಧ ಚರಿತ್ರೆ’ ಎಂಬ ಧಾರ್ಮಿಕ ಸಾಮಾಜಿಕ ವಿಷಯಗಳಿಗೆ ಮೀಸಲಾಗಿದ್ದ ಮಾಸಪತ್ರಿಕೆಯ ಮೂಲಕ ಕನ್ನಡ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದರು. 1912ರಲ್ಲಿ ‘ಕಮಲಕುಮಾರಿ’ ಅನಂತರ ‘ಕುಮುದಿನಿ’ ಕಾದಂಬರಿಗಳು ಪ್ರಕಟವಾದವು. 1918ರವರೆಗೆ ಗಳಗನಾಥರ ಐತಿಹಾಸಿಕ ಕಾದಂಬರಿಗಳು ಆ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡವು. ಇವರ ಕಾದಂಬರಿಗಳ ಪ್ರಕಟಣೆಯ ನಂತರ ‘ಸದ್ಬೋಧ ಚರಿತ್ರೆ’ಯ ಚಂದದಾರರ ಸಂಖ್ಯೆ ಯಥೇಚ್ಛವಾಗಿ ವೃದ್ಧಿಯಾಯಿತು

ಅಂದಿನ ಪ್ರಮುಖ ಸಾಹಿತಿಗಳಾದ ಶ್ರೀರಂಗರು “ನಿರರ್ಗಳ ಪ್ರವಾಹದಂತೆ ಹರಿಯುವ ಶೈಲಿಯಲ್ಲಿ, ಕುತೂಹಲವನ್ನು ಕೆಣಕುವಂತಹ ತಂತ್ರದಲ್ಲಿ ಬರೆದ, ಐತಿಹಾಸಿಕ ಘಟನೆಗಳ ಮೂಲಕ ವೀರಸಾಹಸದ ಕಥೆ ಹೇಳುವ ಗಳಗನಾಥರ ಕಾದಂಬರಿಗಳು ಕನ್ನಡಕ್ಕೆ ನೂರಾರು ವಾಚಕರ ವರ್ಗವನ್ನು ಸೃಷ್ಟಿಸಿತು. ಈ ದೃಷ್ಟಿಯಿಂದ ಆಧುನಿಕ ಕನ್ನಡಸಾಹಿತ್ಯಕ್ಕೆ ಗಳಗನಾಥರ ಕೊಡುಗೆ ಚಿರಸ್ಮರಣೀಯವಾಗಿರುವಂಥದ್ದು” ಎಂದಿದ್ದಾರೆ. ಆ ಕಾದಂಬರಿಗಳು ಕನ್ನಡದ ಮೂಲದವೇ ಎನ್ನುವಂತೆ ಕಾಣುತ್ತಿದ್ದವು. ಮುಖ್ಯವಾಗಿ ಸಮಾಜ, ದೇಶ ಅದರ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಜ್ಞಾನ ಮತ್ತು ಅಭಿಮಾನವನ್ನು ಏಕಕಾಲದಲ್ಲಿ ಓದುಗರಲ್ಲಿ ಮೂಡಿಸುವಂಥ ಕೃತಿಗಳಾಗಿವೆ. ಡಾ. ಕೃಷ್ಣಮೂರ್ತಿ ಕಿತ್ತೂರ ಅವರ ಪ್ರಕಾರ “ಸದ್ಬೋಧ ಚರಿತ್ರೆ ಗಳಗನಾಥರಿಂದ ಬೆಳದಂತೆ, ಗಳಗನಾಥರೂ ಆ ಪತ್ರಿಕೆಯಿಂದ ಬೆಳೆದರೂ ಎನ್ನುವ ಸತ್ಯವನ್ನು ಮರೆಯುವ ಹಾಗಿಲ್ಲ”.

ವೆಂಕಟೇಶ ತಿರಕೋ ಕುಲಕರ್ಣಿ ಅವರು ಅರ್ಥಾತ್ ಗಳಗನಾಥರು ಶಿಕ್ಷಕರಾಗಿ ಮುಖ್ಯೋಪಾಧ್ಯಾಯರಾಗಿ, ಕಾದಂಬರಿಕಾರರಾಗಿ ಮತ್ತು ಪ್ರಕಾಶಕರಾಗಿ ಕನ್ನಡನಾಡಿನಲ್ಲಿ ಪ್ರಸಿದ್ಧರಾಗಿದ್ದಾರೆ. ಅವರು ಶಿಕ್ಷಕರಾಗಿ ಹತ್ತು ಹಲವು ಕಡೆ ಕೆಲಸ ಮಾಡಿದ್ದರು. 1905ರಲ್ಲಿ ಅಗಡಿ ಆನಂದವನದ ಹತ್ತಿರದ ಗುತ್ತಲಕ್ಕೆ ಗಳಗನಾಥರು ಮುಖ್ಯೋಪಾಧ್ಯಾಯರಾಗಿ ಬಂದರು. ಕೆಲವೇ ದಿನಗಳಲ್ಲಿ ಆನಂದವನದ ಅವತಾರ ಪುರುಷರೆಂದು ಖ್ಯಾತರಾಗಿದ್ದ ಪೂಜ್ಯಶ್ರೀ ಶೇಷಾಚಲ ಸದ್ಗುರುಗಳ ಶಿಷ್ಯರಾದರು. ಅವರು ಅವಧೂತರ ಸೇವೆ ಮಾಡಲು ಸ್ವಭಾವತಃ ಸದಾ ಸಿದ್ಧರಿರುತ್ತಿದ್ದರು. ಅವರ ಮೊದಲನೆಯ ಹೆಂಡತಿ ತೀರಿಕೊಂಡ ಅನಂತರ ಎರಡನೆಯ ಪತ್ನಿಯಾಗಿ ಜೀವೂಬಾಯಿ ಬಂದರು. ಶೇಷಾಚಲ ಸದ್ಗುರುಗಳ ಆಶೀರ್ವಾದದಿಂದ ಅವರಿಗೆ ಇಬ್ಬರು ಹೆಣ್ಣು ಮಕ್ಕಳ ಜನನವಾಯಿತು.



**ಕನ್ನಡದ ಕೈಂಕರ್ಯಕ್ಕಾಗಿ 1890ರಲ್ಲಿ ಧಾರವಾಡದಲ್ಲಿ ‘ಕರ್ನಾಟಕ ವಿದ್ಯಾವರ್ಧಕ ಸಂಘ’ ಅಸ್ತಿತ್ವಕ್ಕೆ ಬಂತು. ಅದು ತನ್ನ ಘೋಷಿತ ಉದ್ದೇಶಗಳಲ್ಲೊಂದಾದ ಕನ್ನಡದಲ್ಲಿ ಗದ್ಯಸಾಹಿತ್ಯವನ್ನು ಬೆಳೆಸುವ ಕಾರ್ಯಕ್ರಮವಾಗಿ ಸ್ವತಂತ್ರ ಕಾದಂಬರಿಯೊಂದಕ್ಕೆ ಪ್ರತಿ ವರ್ಷ ಬಹುಮಾನ ಕೊಡುವ ಯೋಜನೆ ಹಾಕಿಕೊಂಡಿತು.**

ಗಳಗನಾಥರ ಸಮಗ್ರ ಕಾದಂಬರಿಯನ್ನು ಅಧ್ಯಯನ ಮಾಡುವುದು ಕಷ್ಟದ ಕೆಲಸ. ಅವರನ್ನು ಕುರಿತಂತೆ ಡಾ. ಕೃಷ್ಣಮೂರ್ತಿ ಕಿತ್ತೂರ ಅವರು ಪಿಹೆಚ್.ಡಿ. ಮಾಡಿದ್ದಾರೆ. ಶ್ರೀ ಬೆಟಗೇರಿ ಕೃಷ್ಣಶರ್ಮರು ಗಳಗನಾಥರ ಸಮಗ್ರವಾದ ಸಾಹಿತ್ಯವನ್ನು ಅಧ್ಯಯನ ಮಾಡಿದ್ದರು.

‘ಕುಮುದಿನಿ’ ‘ಕನ್ನಡಿಗರ ಕರ್ಮಕಥೆ’ ‘ಮಾಧವ ಕರುಣಾವಿಲಾಸ’ ಈ ಮೂರು ಕೃತಿಗಳು ವಿಜಯನಗರದ ಇತಿಹಾಸಕ್ಕೆ ಸಂಬಂಧಪಟ್ಟ ಕಾದಂಬರಿಗಳಾಗಿವೆ. ಸ್ವತಃ ಗಳಗನಾಥರು ಮೆಚ್ಚಿದ ಕಾದಂಬರಿ ಕಮಲಕುಮಾರಿ.

ಕುಮುದಿನಿ ವಿಜಯನಗರ ಸಾಮ್ರಾಜ್ಯ ನಾಶವಾದ ಐವತ್ತು ವರ್ಷಗಳ ನಂತರ ಆಳಿದ ರಾಜವಂಶ ಚಂದ್ರಗುತ್ತಿ ಮನೆತನಕ್ಕೆ ನಿಷ್ಠನಾಗಿ ಹೋರಾಡಿದ ಎಚ್ಚಮ ನಾಯಕನೆಂಬ ವೀರನೊಬ್ಬನ ಶೌರ್ಯ, ಸಾಹಸ, ತ್ಯಾಗದ ಕಥೆಯಾಗಿದೆ. ಪ್ರಾಯಶಃ ಎಚ್ಚಮ ನಾಯಕನನ್ನು ಕುರಿತಂತೆ ಪ್ರಟಕಗೊಂಡ ಮೊದಲ ಕೃತಿಯಿದು. ಚಂದ್ರಗುತ್ತಿ ರಾಜವಂಶದ ಸ್ಥಿತಿಗತಿಗಳಿಂದ ಬೇಸತ್ತ ಈ ಎಚ್ಚಮ ನಾಯಕ ಶಸ್ತ್ರತ್ಯಾಗ ಮಾಡಲು ನಿರ್ಧಾರ ಮಾಡಿದಾಗ ಪೂಜಾರಿಯೊಬ್ಬ ಅವನನ್ನು ತಡೆಯುತ್ತಾನೆ. ಆ ಪೂಜಾರಿಯ ಅಪ್ರತಿಮ ಸುಂದರ ಮಗಳೊಂದಿಗೆ ಪ್ರೇಮವುಂಟಾಗಿ ಇನ್ನೇನು ಮದುವೆಯಾಗಬೇಕು ಎನ್ನುವಷ್ಟರಲ್ಲಿ ತುರ್ತು ಸಂದೇಶ ಬಂದು ಅದರ ಅನುಸಾರವಾಗಿ ಹೋರಾಟದ ಕಣಕ್ಕೆ ಹೋಗುತ್ತಾನೆ ‘ಕುಮುದಿನಿ’ ಸಹ ತನ್ನ ಪ್ರಿಯಕರೊಡನೆ ಯುದ್ಧಕ್ಕೆ ಸಿದ್ಧಳಾಗಿ ಹೋಗುತ್ತಾಳೆ. ಆ ಯುದ್ಧದಲ್ಲಿ ಈಕೆ ದೊಡ್ಡ ಸಾಹಸವನ್ನು ಮೆರೆಯುತ್ತಾಳೆ. ಕಾದಂಬರಿಯಲ್ಲಿ ಹೋರಾಟದ ವಿವರಗಳು ಲಭ್ಯವಿಲ್ಲದಿದ್ದರೂ ಒಂದೆರಡು ಸಾಲುಗಳಲ್ಲಿ ಯುದ್ಧ ಘೋರವಾಗಿದ್ದು ಅದು ಕಠಿಣವಾಗಿತ್ತು ಎನ್ನುವುದು ತಿಳಿಯುತ್ತದೆ. ಹಿರಿಯ ಸಾಹಿತಿಗಳಾದ ಟಿ.ಎಸ್. ವೆಂಕಣ್ಣಯ್ಯ ಅವರು ಕಾದಂಬರಿಯನ್ನು ಓದಿ ಕಣ್ಣೀರು ಸುರಿಸಿದರಂತೆ. ಕುಮದಿನಿಯ ಸೌಂದರ್ಯ ಮನಮೋಹಕವಾಗಿದ್ದರೂ ಅದು ಉದಾತ್ತತೆಯು ಮಿತಿಮೀರಿ ಹೋಗುವುದಿಲ್ಲ. ಕುಮುದಿನಿ ಗಳಗನಾಥರ ಮೊದಲ ಸ್ವತಂತ್ರ ಐತಿಹಾಸಿಕ ಕಾದಂಬರಿ. 1913ರಲ್ಲಿ ಇದು ಪ್ರಕಟವಾಗಿತ್ತು.

1917ರಲ್ಲಿ ಧಾರಾವಾಹಿಯಾಗಿ ಬಂದ ‘ಕನ್ನಡಿಗರ ಕರ್ಮಕಥೆ’ ವಿಜಯನಗರ ಸಾಮ್ರಾಜ್ಯವನ್ನು ಹಾಳು ಮಾಡಿದ ಅಳಿಯ ರಾಮರಾಯನ ಕಥೆ. ಇದು ಹರಿನಾರಾಯಣ ಅಪ್ಟೆ ಅವರ ಮರಾಠಿ ಕಾದಂಬರಿ ‘ವಜ್ರಾಘಾತ’ದ ಅನುವಾದ. ಒಂದು ಕಡೆ ರಾಮರಾಯನ ಪ್ರೀತಿ, ಮೋಹ. ಮತ್ತೊಂದು ಕಡೆ ದುರಾಸೆ. ಇವುಗಳಿಂದಾಗಿ ರಾಮರಾಯ ತನ್ನ ಹಿಂದಿನ ಪ್ರೇಯಸಿ ಮೆಹರ್ಜಾನ್‌ನಲ್ಲಿ ಹುಟ್ಟಿದ ತನ್ನ ಮಗನ ಕೈಯಿಂದಲೇ ಸಾಯುತ್ತಾನೆ. ಅನಂತರ ವಿಜಯನಗರ ಸಾಮ್ರಾಜ್ಯದ ಪತನ ಹೇಗಾಗುತ್ತದೆ ಎನ್ನುವ ಕಥೆಯನ್ನು ಮನಮೋಹಕವಾಗಿ ಹೇಳಿರುವ ಕೀರ್ತಿ ಗಳಗನಾಥರಿಗೆ ಸಲ್ಲಬೇಕು. ಈ ಕಾದಂಬರಿ ನೇರವಾದ ಅನುವಾದವಲ್ಲ. ಅದೊಂದು ರೂಪಾಂತರ.’

‘ಕಮಲಕುಮಾರಿ ಕಾದಂಬರಿಯನ್ನು ನಾನು ಅಕ್ಷರಶಃ ಭಾಷಾಂತರಿಸಿದ್ದೇನೆ, ಉಳಿದ ಕಾದಂಬರಿಗಳನ್ನು ಕನ್ನಡದ ಪರಿಸರಕ್ಕೆ ತಕ್ಕಂತೆ ರೂಪಾಂತರ ಮಾಡಿದ್ದೇನೆ’ ಎಂದು ಗಳಗನಾಥರೇ ಹೇಳಿಕೊಂಡಿದ್ದಾರೆ. 1923ರಲ್ಲಿ ಪ್ರಕಟವಾದ ‘ಮಾಧವ ಕರುಣಾ ವಿಳಾಸ’ ಕಾದಂಬರಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಕಥೆಯನ್ನು ಹೇಳುತ್ತದೆ. 12ಶತಮಾನದಲ್ಲಿ ಭಾರತಕ್ಕೆ ನುಗ್ಗಿ ಧಾಳಿ ಮಾಡಲಾರಂಭಿಸಿದ ಮುಸಲ್ಮಾನರು ದಕ್ಷಿಣ ಭಾರತದ ಕಡೆಗೆ ಬಂದಾಗ ಹಕ್ಕ–ಬುಕ್ಕ ಎಂಬ ಇಬ್ಬರು ಸಹೋದರ ವೀರರು ಗುಂಪು ಕಟ್ಟಿಕೊಂಡು ನೆರೆಯ ಪ್ರವಾಹದಂತೆ ನುಗ್ಗಿ ಬರುತ್ತಿದ್ದ ಮುಸ್ಲಿರ ಧಾಳಿಯನ್ನು ತಡೆದು ಹಿಮ್ಮೆಟ್ಟಿಸಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದ ಕಥೆಯನ್ನು ‘ಮಾಧವ ಕರುಣಾ ವಿಳಾಸ’ ಹೇಳುತ್ತದೆ. ಈ ಇಬ್ಬರು ತರುಣರಿಗೆ ಅವರ ಯೋಜನೆಗಳಿಗೆ ಸರ್ವ ರೀತಿಯಲ್ಲಿಯೂ ಸಹಾಯ ಮಾಡಿ ಉಪದೇಶ ಮಾಡಿದವರು ಧರ್ಮಗುರುಗಳಾದ ಮಾಧವಾಚಾರ್ಯರು. ಗಳಗನಾಥರ ಮಾಧವ ಕರುಣಾ ವಿಳಾಸ ಕಾದಂಬರಿ ಒಟ್ಟು 722 ಪುಟಗಳಿವೆ. ಇದೊಂದು ದೀರ್ಘ ಕಾದಂಬರಿ. ‘ಇತಿಹಾಸದ ಕೃತಿಗಳನ್ನು ಓದುವುದರೊಂದಿಗೆ ಸಮಕಾಲಿನ ಸಮಸ್ಯೆಗಳ ಚಿಂತನೆ ಮಾಡಿ ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು’ ಎನ್ನುವುದು ಗಳಗನಾಥರ ಅಭಿಪ್ರಾಯವಾಗಿದೆ.

ಗಳಗನಾಥರ ಕೃತಿಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು ಕಮಲಕುಮಾರಿ. 1896–97ರಲ್ಲಿ ‘ಪದ್ಮನಯನೆ’ ಕಾದಂಬರಿ ಬರೆದ ಮೇಲೆ ಮತ್ತೆ ಯಾವ ಕಾದಂಬರಿಯನ್ನೂ ಗಳಗನಾಥರು ಬರೆದಿರಲಿಲ್ಲ. 1903–04 ರಲ್ಲಿ ಅವರು ಪಠ್ಯಪುಸ್ತಕದ ಪರಿಶೀಲನಾ ಸಮಿತಿಯ ಸದಸ್ಯರಾಗಿ ಪುಣೆಯಲ್ಲಿ ಮೂರು ನಾಲ್ಕು ತಿಂಗಳು ಕಾಲವಿರಬೇಕಾಗಿತ್ತು. ಈ ಅವಧಿಯಲ್ಲಿ ಮರಾಠಿಯ ಅಂದಿನ ಶ್ರೇಷ್ಠ ಕಾದಂಬರಿಕಾರರಾದ ಹರಿನಾರಾಯಣ ಆಪ್ಟೆ ಅವರ ಗಡ ಆಲಾ ಪಣಸಿಂಹ ಗೋಲಾ ಕಾದಂಬರಿಯನ್ನು ಓದಿದರು.

▶▶ 8ನೇ ಪುಟಕ್ಕೆ...

# ಶ್ರೀದೇವಿ ಆಸ್ಪತ್ರೆಯಲ್ಲಿ ಅಡ್ವಾನ್ಸ್ಡ್ ಕ್ಯಾನ್ಸರ್ ಯಶಸ್ವಿ ಚಿಕಿತ್ಸೆ

▪ ಸಂದರ್ಶನ: ಕೆ. ಎಸ್. ರಾಜಮನ್ನಾರ್

ತೀವ್ರ ಹೊಟ್ಟೆನೋವು, ಉಬ್ಬರ ಹಾಗೂ ಹೊಟ್ಟೆಯಲ್ಲಿ ನೀರು ತುಂಬಿಕೊಂಡು ಪಡಬಾರದ ಸಂಕಟಪಡುತ್ತಿದ್ದ ತುಮಕೂರು ಜಿಲ್ಲೆ ಕುಣಿಗಲ್ ತಾಲೊಕಿನ 50 ವರ್ಷದ ಮಹಿಳೆಗೆ ಅಡ್ವಾನ್ಸ್ಡ್ ಕ್ಯಾನ್ಸರ್ ಶಸ್ತ್ರ ಚಿಕಿತ್ಸೆ ನಡೆಸಿ ಶ್ರೀದೇವಿ ಆಸ್ಪತ್ರೆಯ ವೈದ್ಯರು ಹೊಸ ಇತಿಹಾಸ ಬರೆದಿದ್ದಾರೆ. ಇದೇ ಮೊದಲ ಬಾರಿಗೆ ಜಿಲ್ಲಾಮಟ್ಟದಲ್ಲಿ ಆಸ್ಪತ್ರೆಯ ಅಂಕಾಲಜಿ ವಿಭಾಗದ ವೈದ್ಯರ ತಂಡ 50 ವರ್ಷದ ಮಹಿಳೆಗೆ ಅಡ್ವಾನ್ಡ್ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಸುದೀರ್ಘ 8 ಗಂಟೆಗಳ ಅಪರೇಷನ್. ಹೀಗಾಗಿ ಪ್ರತಿಯೊಂದು ವಿಭಾಗವೂ ಬಹಳ ಎಚ್ಚರಿಕೆಯಿಂದ ರೋಗಿಯ ದೈಹಿಕ, ಮಾನಸಿಕ ಬದಲಾವಣೆಗಳನ್ನು ಗಮನಿಸುವ, ಸವಾಲಿನ ಶಸ್ತ್ರಚಿಕಿತ್ಸೆಯಾಗಿದ್ದು, ನುರಿತವೈದ್ಯರನೇತೃತ್ವದಲ್ಲೇಮಾಡಬೇಕಾಗುತ್ತದೆ ಎಂದು ಅಂಕಾಲಜಿ ವಿಭಾಗದ ಡಾ.ಆರ್. ದಯಾನಂದ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ವಿವರಿಸಿದ್ದಾರೆ.



50 ವರ್ಷದ ನಾಗಮ್ಮ (ಹೆಸರು ಬದಲಾಯಿಸಲಾಗಿದೆ) ತೀವ್ರ ಹೊಟ್ಟೆನೋವು, ಹೊಟ್ಟೆಉಬ್ಬರ ಮತ್ತಿತರ ಸಮಸ್ಯೆಗಳಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಹಲವು ವೈದ್ಯಕೀಯ ಪರೀಕ್ಷೆಗಳ ನಂತರ ಆಕೆ ಮೂರನೇ ಹಂತದ ಅಂಡಾಣು ಕ್ಯಾನ್ಸರ್‌ನಿಂದ ಬಳಲುತ್ತಿರುವುದು ಖಚಿತವಾಯಿತು. ಅಮೆರಿಕಾದ ಕ್ಯಾನ್ಸರ್ ತಜ್ಞ ಡಾ. ಪಾಲ್ ಎಚ್. ಶುಗರ್‌ಬೇಕರ್ ಅಭಿವೃದ್ಧಿಪಡಿಸಿರುವ ಸೈಟೊರೆಡಕ್ಟಿವ್ ಶಸ್ತ್ರಚಿಕಿತ್ಸೆ ಹಾಗೂ ಹೀಟೆಡ್ ಕಿಮೊಥೆರಪಿ ಸಂಯೋಜನೆ (CRS and HIPEC) ಚಿಕಿತ್ಸಾ ವಿಧಾನದ ಮೂಲಕ ನೀಡಿದ ಚಿಕಿತ್ಸೆ ಯಶಸ್ವಿಯಾಗಿದೆ.

ಹೊಟ್ಟೆಗೆ ಸಂಬಂಧ ಪಟ್ಟ ಕ್ಯಾನ್ಸರ್ ಮೂರನೇ ಹಂತ ತಲುಪಿದ್ದಾಗ ಮಾತ್ರ ಈ ಅಡ್ವಾನ್ಡ್ ಅಪರೇಷನ್ ನಡೆಸಲಾಗುತ್ತದೆ. ವಿಶೇಷವಾಗಿ ಮೂರು ತರಹ ಸಮಸ್ಯೆಗಳೆಂದರೆ ಅಂಡಾಣು ಕ್ಯಾನ್ಸರ್, ಅಪೆಂಡಿಕ್ಸ್ ಕ್ಯಾನ್ಸರ್ ಹಾಗೂ ಹೊಟ್ಟೆ ಕ್ಯಾನ್ಸರ್ ಗಳಿಗೆ ಮಾತ್ರ ಈ ಮಾದರಿಯ ಚಿಕಿತ್ಸೆ ಮಾಡಲಾಗುತ್ತದೆ. ಇದನ್ನು ಹೊರತು ಪಡಿಸಿ ಶ್ವಾಸಕೋಶ, ದೇಹದ ಇತರೆ ಭಾಗಗಳ ಗಂಟುಗಳಲ್ಲಿ ಕ್ಯಾನ್ಸರ್ ಕಣಗಳು ಹರಡಿಕೊಂಡಿದ್ದರೆ ಈ ಚಿಕಿತ್ಸೆ ಮಾಡಲು ಸಾಧ್ಯವಿಲ್ಲ ಎಂದು ಅವರು ವಿವರಿಸುತ್ತಾರೆ.

ಮೊದಲು ಸಿಆರ್‌ಎಸ್ ಶಸ್ತ್ರಚಿಕಿತ್ಸೆ ಮೂಲಕ ಕ್ಯಾನ್ಸರ್ ಪೀಡಿತ ಭಾಗಗಳನ್ನು ತೆಗೆದು ಉಳಿದ ಕ್ಯಾನ್ಸರ್ ಕಣಗಳನ್ನು ಹೊಟ್ಟೆಯಿಂದ ತೆಗೆಯಲು ಐವಿ ಬದಲು ಹೊಟ್ಟೆಯೊಳಗೆ ಹೀಟೆಡ್ ಕಿಮೋಥೆರಪಿ ಮಾಡಲಾಗುತ್ತದೆ. 41 ರಿಂದ 42 ಡಿಗ್ರಿ ಉಷ್ಣಾಂಶದಲ್ಲಿ ಸಲೈನ್‌ಮೂಲಕ ಕಿಮೋ ಹಾಕಿ ಹೊಟ್ಟೆಯ ಎಲ್ಲಾ ಭಾಗಗಳಿಗೆ ಪಸರಿಸುವಂತೆ ಮಾಡಿ ಅಂಟಿಕೊಂಡಿರುವ ಕ್ಯಾನ್ಸರ್ ಕಣಗಳನ್ನು ನಿರ್ಮೂಲನೆಗೊಳಿಸಲಾಗುತ್ತದೆ. ಹೀಗೆ ಮಾಡುವುದರಿಂದ ಮತ್ತೆ ಈ ಸಮಸ್ಯೆ ಮರುಕಳಿಸುವುದಿಲ್ಲ.

ಈ ಚಿಕಿತ್ಸೆಗೆ ಬೆಂಗಳೂರು ಸೇರಿದಂತೆ ದೇಶದ ದೊಡ್ಡ ನಗರಗಳಾದ ಮುಂಬೈ ದೆಹಲಿ, ಚೆನ್ನೈ, ಹೈದ್ರಾಬಾದ್ ಸೇರಿದಂತೆ ಸುಸಜ್ಜಿತ ಹೈಟೆಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ 10 ಲಕ್ಷರೂಪಾಯಿಗೂ ಹೆಚ್ಚು ವೆಚ್ಚವಾಗುತ್ತದೆ ಆದರೆ, ಶ್ರೀದೇವಿ ಆಸ್ಪತ್ರೆಯಲ್ಲಿ ಇದರಲ್ಲಿ ಶೇಕಡ 50 ರಷ್ಟು ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತದೆ.

ಸತತ 8 ಗಂಟೆ ಆಪರೇಷನ್ ನಂತರ ಮೂರು ದಿನ ತೀವ್ರ ನಿಗಾ ಘಟಕದಲ್ಲಿ ಅನಂತರ 10 ದಿನ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆದಿರುವ ನಾಗಮ್ಮ ಮೂರು ತಿಂಗಳಿನಿಂದ ಯಾವುದೇ ಸಮಸ್ಯೆಯಿಲ್ಲದೆ ಆರೋಗ್ಯಜೀವನನಡೆಸುತ್ತಿದ್ದಾರೆ. ದೈನಂದಿನ ಮತ್ತು ಮೊದಲಿನಂತೆ ಕೆಲಸ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

### ಡಾ.ಆರ್.ದಯಾನಂದ್ - ಅಪ್ಪಟ ಗ್ರಾಮೀಣ ಪ್ರತಿಭೆ



ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲೂಕು, ಹರಿಯಬ್ಬೆ ಗ್ರಾಮದಲ್ಲಿ ಜನನ. ತಂದೆ ರೇವಣ್ಣ. ತಾಯಿ ಜಯಮ್ಮ. ಹುಟ್ಟೂರಿನಲ್ಲೆ ಪ್ರಾಥಮಿಕ ಶಿಕ್ಷಣ. ನಂತರ ತುಮಕೂರಿನ ಸರ್ವೋದಯಾ ಕಾಲೇಜಿನಲ್ಲಿ ಪಿಯುಸಿ. ಸಿಇಟಿ ಮೂಲಕ ವೈದ್ಯಕೀಯ ಸೀಟು ಪಡೆದು ಹುಬ್ಬಳ್ಳಿಯ ಕಿಮ್ಸ್ ನಲ್ಲಿ 5 ವರ್ಷ ವೈದ್ಯಕೀಯ ಪದವಿ ನಂತರ 3 ವರ್ಷದ ಎಂ.ಎಸ್. ಜನರಲ್ ಸರ್ಜರಿ. ಕೇರಳದ ಕ್ಯಾಲಿಕಟ್‌ನ ಎಂ ವಿ. ಆರ್ ಕ್ಯಾನ್ಸರ್ ಸೆಂಟರ್ ಮತ್ತು ಸಂಶೋಧನಾ ಸಂಸ್ಥೆ ಯಲ್ಲಿ ಮೂರು ವರ್ಷ ಅಂಕೋ ಸರ್ಜರಿ ಕೋರ್ಸ್ ಮಾಡಿ ಅಲ್ಲಿಯೇ ಒಂದು ವರ್ಷ ಕೆಲಸದ ಅನುಭವ. ವೈದ್ಯರಾಗುವುದು ಸುಲಭದ ಮಾತಲ್ಲ. ಅದರಲ್ಲೂ ಒಬ್ಬ ಪರಿಪೂರ್ಣ ವೈದ್ಯನಾಗಿ ವೃತ್ತಿಯಲ್ಲಿ ಗಟ್ಟಿಯಾಗಿ ನಿಲ್ಲಬೇಕಾದರೆ ಸತತ ಪರಿಶ್ರಮ, ನಿರಂತರ ಅಧ್ಯಯನ ಮುಖ್ಯ. ಸ್ವಯಂ ಪ್ರತಿಭೆ, ಸ್ವಂತಶಕ್ತಿಯಿಂದ ಅರಳಿದ ಅಪ್ಪಟ ಗ್ರಾಮೀಣ ಪ್ರತಿಭೆ. ಸುಮಾರು 13 ವರ್ಷಗಳ ಸತತ ಅಧ್ಯಯನದ ಅನಂತರ ಕಳೆದ ಮೂರು ವರ್ಷಗಳಿಂದ ತುಮಕೂರಿನ ಶ್ರೀದೇವಿ ಆಸ್ಪತ್ರೆಯಲ್ಲಿ ಅಂಕೋಲಜಿ ಸರ್ಜನ್ ಆಗಿದ್ದು, ಅಡ್ವಾನ್ಸ್ಡ್ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಹೆಸರು ವಾಸಿಯಾಗಿದ್ದಾರೆ.

### ಸಿಆರ್‌ಎಸ್ + ಹೆಚ್‌ಐಪಿಇಸಿ ಎಂದರೇನು ?

ಇದು ಎರಡು ಹಂತಗಳಲ್ಲಿ ನಡೆಯುವ ಅಡ್ವಾನ್ಡ್ ಕ್ಯಾನ್ಸರ್ ಚಿಕಿತ್ಸೆಯಾಗಿದೆ. ಮೊದಲ ಹಂತದಲ್ಲಿ ಸಿಆರ್‌ಎಸ್ ಮೂಲಕ ದೇಹದಲ್ಲಿನ ಕ್ಯಾನ್ಸರಿನ ಭಾಗಗಳನ್ನು ಅಪರೇಷನ್ ಮೂಲಕ ತೆಗೆದುಹಾಕಲಾಗುತ್ತದೆ ನಂತರ ಹೆಚ್‌ಐಪಿಇಸಿ ತಂತ್ರದ ಮೂಲಕ ಹೀಟೆಡ್ ಕಿಮೋಥೆರಪಿ ದ್ರವವನ್ನು ಉದರದೊಳಗೆ ಹರಿಸಿ ಅಳಿದುಳಿದುರುವ ಕ್ಯಾನ್ಸರ್ ಕೋಶಗಳನ್ನು ನಾಶಪಡಿಸಲಾಗುತ್ತದೆ. ಈ ಆಧುನಿಕ ಚಿಕಿತ್ಸಾ ವಿಧಾನವನ್ನು ಅಮೆರಿಕಾದ ವಾಷಿಂಗ್ಟನ್ ಕ್ಯಾನ್ಸರ್ ಇನ್ಸಿಟ್ಯೂಟ್ ಸರ್ಜನ್ ಡಾ. ಪಾಲ್ ಎಚ್. ಶುಗರ್‌ಬೇಕರ್ ಅವರು ಜಗತ್ತಿಗೆ ಪರಿಚಯಿಸಿದ್ದರು. ಅದೇ ವಿಧಾನ ಅನುಸರಿಸಿ ಶ್ರೀದೇವಿ ಆಸ್ಪತ್ರೆ ಕ್ಯಾನ್ಸರ್ ಚಿಕಿತ್ಸೆಯಲ್ಲಿ ತುಮಕೂರಿನಲ್ಲಿ ಹೊಸ ಮೈಲಿಗಲ್ಲು ನಿರ್ಮಿಸಿ ಯಶಸ್ವಿಯಾಗಿದೆ.

### ವೈದ್ಯರ ತಂಡದಲ್ಲಿ ಯಾರು?

ಡಾ.ಆರ್.ದಯಾನಂದ್, ಸರ್ಜಿಕಲ್ ಅಂಕಾಲಜಿ, ಅರಿವಳಿಕೆ ವಿಭಾಗದ ಮುಖ್ಯಸ್ಥೆ ಡಾ. ಕಾವ್ಯಶ್ರೀ, ಕೆ.ಟಿ. ಪ್ರತಿಭಾ, ಮೆಡಿಕಲ್ ಅಂಕಾಲಜಿ ಡಾ. ಅನಿಲ್, ಡಾ.ಸುಷ್ಮಾ, ರೇಡಿಯಾಲಜಿ ವಿಭಾಗದ ಡಾ.ಹರೀಶ್, ಡಾ.ದಿವ್ಯಾ, ಹಾಗೂ ಡಾ. ಶ್ರೀನಿಧಿ ಹಾಗೂ ಆಪರೇಷನ್ ತಂಡ, ಐ.ಸಿ.ಯು. ಮತ್ತು ಶುಶ್ರೂಷಕರು ತಂಡದಲ್ಲಿದ್ದವರು.

### ಯಾರು ಡಾ. ಪಾಲ್ ಎಚ್. ಶುಗರ್‌ಬೇಕರ್?



ಅಮೆರಿಕಾದ ಕ್ಯಾನ್ಸರ್ ಸರ್ಜನ್, ಅಂಡಾಶಯಕ್ಕೆ ಸಂಬಂಧಿಸಿದ ಕ್ಯಾನ್ಸರ್‌ಗೆ ಶಸ್ತ್ರಚಿಕಿತ್ಸೆ ಹಾಗೂ ಕಿಮೋಥೆರಪಿ ಸಂಯೋಜಿಸಿ ಹೊಸಚಿಕಿತ್ಸಾ ವಿಧಾನವನ್ನು ಕಂಡುಹಿಡಿದು ವೈದ್ಯಕೀಯ ಲೋಕದಲ್ಲಿ ಹೆಸರುವಾಸಿಯಾಗಿದ್ದಾರೆ. 84ರ ಇಳಿವಯಸ್ಸಿನಲ್ಲೂ ಭಾರತ ಸೇರಿದಂತೆ ಜಗತ್ತಿನ ಬೇರೇ– ಬೇರೆ ದೇಶಗಳಲ್ಲಿ ಸಂಚರಿಸಿ ಅಡ್ವಾನ್ಡ್ ಶಸ್ತ್ರಚಿಕಿತ್ಸೆ ನೆರವೇರಿಸಿ ಲಕ್ಷಾಂತರ ಮಹಿಳೆಯರ ಜೀವ ಉಳಿಸಿದ್ದಾರೆ. ಇಂದಿಗೂ ಅಂಡಾಶಯ ಕ್ಯಾನ್ಸರ್ ಪೀಡಿತ ಪಾಲಿಗೆ ದೇವರ ರೂಪದಲ್ಲಿಕಾಣಿಸಿಕೊಳ್ಳುತ್ತಿದ್ದಾರೆ ಎಂಬ ಮಾತು ವೈದ್ಯಕೀಯ ಲೋಕದಲ್ಲಿ ಜನಜನಿತವಾಗಿದೆ.

# ಕನ್ನಡ ಕಾದಂಬರಿ ಪಿತಾಮಹರು - ಶ್ರೀ ಗಳಗನಾಥರು

▶▶ 7ನೇ ಪುಟದಿಂದ

ಅದು ಅವರಿಗೆ ಬಹಳ ಹಿಡಿಸಿತ್ತು. 1908ರಲ್ಲಿ ಈ ಕಾದಂಬರಿಯನ್ನು ಸದ್ಬೋಧಚರಿತ್ರೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಲು ನಿರ್ಧಾರ ಮಾಡಿದರು. ಕನ್ನಡದ ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಲು ಪ್ರಾರಂಭವಾಗಿದ್ದು ಇದೇ ಮೊದಲು ಎನ್ನಲಾಗಿದೆ. ಧರ್ಮಾಭಿಮಾನಿ ಶಿವಪ್ರಭುವಿನ ಕೊಂಡಾಣಾ ಎಂದು ಪ್ರಸಿದ್ಧವಾಗಿದ್ದು, ಇಂದು 'ಸಿಂಹಗಡ' ಎಂದು ಪ್ರಸಿದ್ಧವಾಗಿರುವ ಕೋಟೆಯನ್ನು ಶಿವಾಜಿ ಸರದಾರ ವಶಪಡಿಸಿಕೊಂಡ ಕಥೆಯನ್ನು ಈ ಕಾದಂಬರಿ ಹೇಳುತ್ತದೆ. ಈ ಕಾದಂಬರಿಗೆ ಇದಕ್ಕಿಂತ ಹೆಚ್ಚಿನದು ಬೇರೆಯಿದೆ.

ಧಾಳಿಕೋರರಾದ ಮುಸಲ್ಮಾನರ ಉಪಟಳವನ್ನು ತಡೆಯುವ ಕಾಯಕದಲ್ಲಿ ತೊಡಗಿದ್ದ ಮೇವವಾಡದ ಸರದಾರ ವೀರಸಿಂಹ ಕಾಳಗವೊಂದರಲ್ಲಿ ಮಡಿದ. ಅವನ ಸುಂದರ ಮಡದಿ ಕಮಲಕುಮಾರಿ ಸತಿ ಹೋಗಬಯಸಿದರೂ, ದುರ್ದೈವವಶಾತ್ ಔರಂಗಜೇಬನ ಸರದಾರ ಉದಯಭಾನುವಿನ ಕೈಸೆರೆಯಾದಳು. ಜಾತಿಸಂಬಂಧಿತ ಪೂರ್ವದ್ವೇಷ ತೀರಿಸಿಕೊಳ್ಳಲು ಉದಯಭಾನು ಕಮಲ ಕುಮಾರಿಯನ್ನು ಮದುವೆಯಾಗಲು ಬಯಸಿದ್ದನು. ಅವನು ಔರಂಗಜೇಬನ ಕಾಲಾವಧಿಯಲ್ಲಿ ಕೊಂಡಾಣದುರ್ಗದ ಅಧಿಪತ್ಯ ವಹಿಸಿಕೊಂಡಿದ್ದನು. ಅಲ್ಲಿ ಕಮಲಕುಮಾರಿಯನ್ನು ನಜರ್ ಬಂಧಿಯಾಗಿಟ್ಟಿದ್ದನು. ಕೊಂಡಾಣಾದುರ್ಗವು ಆಯಕಟ್ಟಿನ ಸ್ಥಳವಾಗಿದ್ದರಿಂದ ಶಿವಾಜಿಗೆ ಅದನ್ನು ಆದಷ್ಟು ಬೇಗ ವಶಪಡಿಸಿಕೊಳ್ಳುವ ತವಕವಿತ್ತು. ಇದನ್ನು ತಿಳಿದ ಶಿವಾಜಿಯ ಅಚ್ಚುಮೆಚ್ಚಿನ ಬಂಟನಾದ ತಾನಾಜಿ ಮೊಲಸುರೆ ತಾನು ಈ ಕೆಲಸವನ್ನು ಮಾಡುವುದಾಗಿ ಶಿವಾಜಿಗೆ ವಚನ ಕೊಟ್ಟ. ಉದಯಭಾನು ಕೊಟ್ಟ ಕಾಲಮಿತಿ ಮೀರಬಾರದೆಂದು ತಾನಾಜಿ ಮೊಲಸುರೆ ಯಾರ ಸಹಾಯವನ್ನೂ ನಿರೀಕ್ಷಿಸದೆ ಕೊಂಡಾಣಾದ ಕೋಟೆಯ ಮೇಲೆ ಧಾಳಿ ನಡೆಸಿ ಶಿವಾಜಿ ಮಹಾರಾಜರಿಗಾಗಿ ಆ ಕೋಟೆಯನ್ನು ಗೆದ್ದು ಕೊಡುತ್ತಾನೆ. ಕಮಲಕುಮಾರಿಯನ್ನು ಬಂಧನದಿಂದ ಬಿಡುಗಡೆ ಮಾಡುತ್ತಾನೆ. ತನ್ನ ಮಗನ ಮದುವೆ ಮುಂದೆ ಇದ್ದರೂ ಯುದ್ಧಭೂಮಿಗೆ ಹೋಗಿ ಕೋಟೆ ಗೆದ್ದು ಕೊಟ್ಟ ಅನಂತರ ತಾನಾಜಿ ವೀರಮರಣವನ್ನು ಅಪ್ಪುತ್ತಾನೆ. ಸಿಂಹಗಡದ ಕೋಟೆ ಶಿವಾಜಿಯ ಪಾಲಿಗೆ ದೊರೆಯುತ್ತದೆ. ಅನಂತರ ಕಮಲಕುಮಾರಿ ಶಿವಾಜಿಯ ಆಜ್ಞೆ ಪಡೆದು ಸತಿ ಹೊಂದುತ್ತಾಳೆ.

ಒಟ್ಟಾರೆ ಗಳಗನಾಥರ ಕಾದಂಬರಿಗಳು ಘಟನಾಪ್ರಧಾನವಾಗಿದ್ದು, ರಾಷ್ಟ್ರಭಕ್ತಿ ಮತ್ತು ಧರ್ಮಶ್ರದ್ಧೆಯನ್ನು ಪೋಷಿಸಿಕೊಂಡು ಬರುತ್ತದೆ. ಅಲ್ಲಿ ಪಾತ್ರರಚನೆಗೆ ಎರಡನೇ ಸ್ಥಾನ ದೊರೆಯುತ್ತದೆ. ಕಾದಂಬರಿ ಕಲಾತ್ಮಕವಾಗಿರುವಂತೆ ಉದ್ಬೋಧಕವೂ ಆಗಿದೆ. ರಾಷ್ಟ್ರಪ್ರೇಮವನ್ನು ತರುಣರಲ್ಲಿ ಒಡಮೂಡಿಸುವ ಉದ್ದೇಶ ಮೂಲಲೇಖಕರಾದ ಆಪ್ಟೆ ಅವರ ಕೃತಿಯಲ್ಲಿದ್ದು, ಅದು ಭಾಷಾಂತರದಲ್ಲೂ ಸಮರ್ಪಕವಾಗಿ ಪಡಿಮೂಡಿದೆ

'ಗಳಗನಾಥರ ಪ್ರಕಾರ ಕಾದಂಬರಿ ಎಂದರೆ ಅದ್ಭುತ ರಮ್ಯವಾದ ಶೈಲಿಯಲ್ಲಿ ಕಥೆ ಹೇಳುವುದಾಗಿರುತ್ತದೆ. ಬಿ.ವೆಂಕಟಾಚಾರ್ಯರು ಬಂಗಾಳಿಯಿಂದ ಕನ್ನಡಕ್ಕೆ ಅನುವಾದಿಸಿದ ಕಾದಂಬರಿಗಳಲ್ಲಿ ಕಾಣುವ ಜಟಿಲವಾದ ಶೈಲಿ ಗಳಗನಾಥರಲ್ಲಿ ಕಂಡುಬರುವುದಿಲ್ಲ' ಎಂದು ಬೆಟಗೇರಿ ಕೃಷ್ಣಶರ್ಮರು ಹೇಳುತ್ತಾರೆ. ಗಳಗನಾಥರ ಕಾದಂಬರಿಗಳನ್ನು ಕುರಿತಂತೆ ವಿಮರ್ಶಕರು ಹೇಳುವ ಮಾತುಗಳು ಇವು. "ಅವರು ಕೈಗಡ ತಂದು ಬಿತ್ತಿ ಕೃಷಿ ಮಾಡಿದ ಬೀಜಗಳು, ಇಂದು ನಮಗೆ ಸ್ವತಂತ್ರ ಕಾದಂಬರಿಗಳ ಸಾಹಿತ್ಯದ ಸತ್ಫಲಗಳು ದೊರೆಯಲು ಪ್ರೇರಕವಾಗಿವೆ, ಪೋಷಕವಾಗಿವೆ".

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**